ಜ್ಯೋತಿಕಾರ್ಯದ ವಾರ್ತಾಪತ್ರ

# ತಪೋವಾಣಿ

ಸಂ. 8 ಸಂ. 8 ಆಗಸ್ಟ್ 2011 ರೂ.15



ಮಹರ್ಷಿ ಅಮರ (1919-1982)

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದ್ದಾರೆ.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ–ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
★ ಪ್ರೀತಿ ನಮ್ಮ ಸ್ವಭಾವ.
★ ಮೌನ ನಮ್ಮ ಭಾಷೆ.
★ ಧ್ಯಾನ ನಮ್ಮ ಮಾರ್ಗ.
★ ಈ ಪ್ರಪಂಚ ನಮ್ಮ ಆಶ್ರಮ.
★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.

## ಅನಿಸಿಕೆಗಳು

ಗುರೂಜಿ ಕೃಷ್ಣಾನಂದ

(ಅನು: ಶ್ಯಾಮಲಾದೇವಿ)

ಮಹರ್ಷಿ ಅಮರರವರು(1919–1982), ಈಗ ಉನ್ನತ ಲೋಕಗಳಲ್ಲಿರುವ ಸಪ್ತಋಷಿಗಳು ಅಥವಾ ಹೈರಾರ್ಕಿಯ ಮುಖಂಡತ್ವದಲ್ಲಿ ಕೆಲಸಮಾಡುತ್ತಿರುವ ಋಷಿಗಳಿಗೆ, ಒಬ್ಬ ಅಸಾಧಾರಣ ಚಾನಲ್ ಆಗಿದ್ದರು. ಅವರು ಕೆಳತಂದ ಜ್ಞಾನ, ಪ್ರಾಚೀನ ಕಾಲದ ಋಷಿಗಳು ಈ ಭೂಮಿಯ ಮಟ್ಟಕ್ಕೆ ತಂದ ಜ್ಞಾನದ ಮುಂದಿನ ಭಾಗ. ಅವರು ಎಲ್ಲ ಆಧ್ಯಾತ್ಮಿಕ ಅನ್ವೇಷಿಗಳಿಗೆ ಈ ಜ್ಞಾನವನ್ನು ನೀಡಿ ಮಾರ್ಗದರ್ಶಿಸಿದರು ಮತ್ತು ತಾವು ಖುದ್ದಾಗಿ ಸಂಗ್ರಹಿಸಿದ್ದ ಹೊಸಯುಗದ ಚೈತನ್ಯಗಳನ್ನು ಒದಗಿಸಿದರು. ಈಗ ಅವರು ವಾಸವಾಗಿರುವ ದೂರದ ಗ್ಯಾಲಕ್ಸಿಯಿಂದ, ಈಗಲೂ ಕೂಡ ಅವರು ನಮಗೆ ಮಾರ್ಗದರ್ಶನವನ್ನು ಮುಂದುವರಿಸುತ್ತಿರುವುದು, ನಾವು ಅತ್ಯಂತ ಸಂತೋಷಪಡಬೇಕಾದ ವಿಷಯ. ಏಕೆಂದರೆ ಅಂಥ ಮಾಸ್ಟರ್‌ಗಳು ನಮ್ಮ ಭೂಮಿಗೆ ಬಹಳ ಅಪರೂಪವಾಗಿ ಬರುತ್ತಾರೆ.

ಆಧ್ಯಾತ್ಮಿಕ ಪಯಣದಲ್ಲಿ ಯಾವುದೇ ನೋವುಗಳಿರುವುದಿಲ್ಲ ಎಂದು ಅವರು ಬೋಧಿಸಿದರು ಮತ್ತು ತೋರಿಸಿಕೊಟ್ಟರು. ಚಕ್ರಗಳು ಚಾಲನೆಗೊಂಡಾಗ ಯಾವುದೇ ನೋವಾಗುವುದಿಲ್ಲ. ಕುಂಡಲಿನಿ ಮೇಲೇರಿದಾಗ ಯಾವುದೇ ನೋವುಗಳಿರುವುದಿಲ್ಲ. ನಮ್ಮ ಶರೀರ–ವ್ಯವಸ್ಥೆಗಳ ಮೇಲೆ ಅದ್ಭುತ ಚೈತನ್ಯಗಳು ಕೆಲಸಮಾಡುವಾಗ ಮತ್ತು ಆಧ್ಯಾತ್ಮಿಕ ಪ್ರಗತಿಯಲ್ಲಿ ಮುನ್ನಡೆ ಸಾಧಿಸುವಾಗ ನಮ್ಮ ವರ್ತನೆಯಲ್ಲಿ ನಿಶ್ಚಯವಾಗಿ ಯಾವುದೇ ವೈಪರೀತ್ಯಗಳಾಗುವುದಿಲ್ಲ. ವಾಸ್ತವವಾಗಿ ವಿವೇಕದಿಂದ ಸಹಜ ಜೀವನವನ್ನು ನಡೆಸುವುದು ಆಧ್ಯಾತ್ಮಿಕ ಜೀವನದ ಸೂಚನೆಯಾಗಿದೆ. ಘನತೆ, ಗಾಂಭೀರ್ಯ, ವಿವೇಕ, ಮೌನ, ಶಾಂತಿ ಮತ್ತು ಪ್ರೀತಿಗಳನ್ನು ಹೊರಸೂಸುವುದು ಆಧ್ಯಾತ್ಮಿಕ ಅನ್ವೇಷಿಯ ಕೆಲವು ವರ್ಣನೆಗಳು, ಹಾಗೂ ಒಬ್ಬ ಗುರುವಿನ ವರ್ಣನೆಗಳು ಕೂಡಾ! ಅಮರರವರು ನಮಗೆ ಕಲಿಸುವುದಕ್ಕಾಗಿ ಇವೆಲ್ಲವನ್ನೂ ಬದುಕಿ ತೋರಿಸಿದರು. ಅವರು ಇವೆಲ್ಲವನ್ನೂ ಮೌನ ಮತ್ತು ಗಾಂಭೀರ್ಯದಲ್ಲಿ ನಮಗೆ ಕಲಿಸಿದರು.

ನಾನು ಅಮರರವರನ್ನು ಭೇಟಿಮಾಡಿರದಿದ್ದರೆ, ಈ ಆಧ್ಯಾತ್ಮಿಕ–ಮೇರುವಿನಿಂದ ಕಲಿಯದಿರದಿದ್ದರೆ, ನಾನೂ ಕೂಡ, ಈಗ ನಾನು ಸುತ್ತಮುತ್ತ ನೋಡುತ್ತಿರುವ ಸೋಗುಗಾರರು ಮತ್ತು ಜೋಕರ್‌ಗಳ ಬಲೆಗೆ ಸಿಕ್ಕಿಬೀಳುತ್ತಿದ್ದೆ. ಅಮರರವರು ಕ್ರಿಸ್ತನ ಉವಾಚವೊಂದನ್ನು ನಮಗೆ ನೆನಪಿಸಿಕೊಡುತ್ತಿದ್ದರು: "ನನ್ನ ತಂದೆ ಬರುವ ಮುನ್ನ, ಅನೇಕ ಸುಳ್ಳು ಪ್ರವಾದಿಗಳು ಬರುತ್ತಾರೆ."

ಒಬ್ಬ ಗುರುವನ್ನು ನಿಜವಾಗಿ ಅರ್ಥಮಾಡಿಕೊಂಡು ಅವರ ಮಾರ್ಗದಲ್ಲಿ ನಡೆಯುವುದು, ಅವರನ್ನು ನೆನಪು ಮಾಡಿಕೊಳ್ಳುವ ಸಂದರ್ಭದಲ್ಲಿ ನಾವು ಅವರಿಗೆ ಕೊಡುವ ಅತ್ಯುತ್ತಮ ಕಾಣಿಕೆ. ನಾವು ಅಮರರವರನ್ನು ವಿಶೇಷವಾಗಿ ಅವರ ಮಹಾಸಮಾಧಿ ದಿನದಂದು, 2011 ಆಗಸ್ಟ್ 25, ನೆನಪು ಮಾಡಿಕೊಳ್ಳುತ್ತೇವೆ.

ಮುಂಬೈನ ಸ್ಫೋಟಗಳು, ಹಗರಣಗಳು, ರಾಜಕೀಯ ಕಿತ್ತಾಟಗಳು ಮತ್ತು ಅಂಥ ಎಲ್ಲ ಮಾನವ–ನಿರ್ಮಿತ ದುರಂತಗಳು ನಮ್ಮನ್ನು ಸಿನಿಕತೆ, ತೀವ್ರ ನಿರಾಶೆ ಮತ್ತು ಹತಾಶೆಗಳಿಗೆ ನೂಕುತ್ತವೆ. ಇದು ಸ್ವಾಭಾವಿಕ. ಆದರೆ ನಾವು ಹಿಮ್ಮೆಟ್ಟಬಾರದು. ನಾವು ಈಗಿನ ಪರಿಸ್ಥಿತಿಯಿಂದಾಚೆ ನೋಡಬೇಕು. ನಾವು ಹೊಸಯುಗದ ಚೈತನ್ಯಗಳು ಮತ್ತು ಈ ಭೂಮಿಯ ಮೇಲಿರುವ ಬೆಳಕಿನ ಕಾರ್ಯಕರ್ತರ ಬಗ್ಗೆ ತಿಳಿದುಕೊಳ್ಳಬೇಕು. ಮಾನವ ಮಾಡುವ ತಪ್ಪುಗಳು ಮತ್ತು ದುರಂತಗಳ ಕತ್ತಲಿನಿಂದಾಚೆ ಮನುಕುಲವನ್ನು ಕರೆದೊಯ್ಯಲು ಅಗಾಧವಾದ ಪ್ರಯತ್ನ ನಡೆಯುತ್ತಿದೆ. ನಮ್ಮ ಮುಂದೆ ಭರವಸೆಯಿದೆ. ಇಲ್ಲಿಂದಾಚೆ ಪ್ರೀತಿ ಮತ್ತು ಬದುಕುಗಳಿವೆ.

ನಾವು, ಅನೇಕ ಜನರು, ಇಡೀ ಪ್ರಪಂಚಕ್ಕೆ ಬೆಳಕನ್ನು ಚಾನಲ್ ಮಾಡುತ್ತಿದ್ದೇವೆ. ಬೆಳಕು ಕೆಲಸಮಾಡುತ್ತಿದೆ ಎಂಬ ಅರಿವು ನಮಗಿದೆ. ಇದರ ಫಲಿತಾಂಶವನ್ನು ನಾವು ನಿಧಾನವಾಗಿ ಕಾಣುತ್ತೇವೆ. ಭ್ರಷ್ಟಾಚಾರವನ್ನು ತೊಡೆದುಹಾಕಲು ಬೆಳಕನ್ನು ಚಾನಲ್ ಮಾಡಿ ಎಂದು ನಾನು ಹೇಳಿದರೆ, ಈಗ ಜನ ನನ್ನನ್ನು ನೋಡಿ ನಗುತ್ತಾರೆ. ಆದರೆ, ಎಂದಾದರೊಂದು ದಿನ ಬೆಳಕಿನ ಕ್ರಾಂತಿಯನ್ನು ಪ್ರತಿಯೊಬ್ಬರೂ ಕಣ್ಣಾರೆ ಕಾಣುತ್ತಾರೆ ಎಂದು ನನಗೆ ಗೊತ್ತಿದೆ. ■

ಮಾನಸ ಫೌಂಡೇಶನ್ (ರಿ)
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077. ಭಾರತ.
✆ (080) 2846 5280, 2271 5501, 93420 30250 (ಬೆಳಗ್ಗೆ 10ರಿಂದ ಮಧ್ಯಾಹ್ನ 1)
ಇ–ಮೇಲ್: info@lightagemasters.com ವೆಬ್‌ಸೈಟ್: www.lightagemasters.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ
ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ
ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ಹಿಮಾಂಶು, 4ನೇ ಮುಖ್ಯರಸ್ತೆ,
ಮಲ್ಲೇಶ್ವರಂ

### ಆನೇಕಲ್‌ನಲ್ಲಿ (ರಾಜರಾಜೇಶ್ವರಿ ಬಡಾವಣೆ)

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ) ಪ್ರಕಾಶ್‌ಮಾರ್ಗ್ (ಮರಾಠಿ) ವಾರ್ತಾಪತ್ರದ ವಾರ್ಷಿಕ ಚಂದಾ ರೂ.200/- ಡಿಡಿಯನ್ನು 'Manasa Light Age Foundation' ಹೆಸರಿನಲ್ಲಿ ಕಳುಹಿಸಬೇಕು. ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.



"ಚಿಕ್ಕಗುಬ್ಬಿ ಗ್ರಾಮದಲ್ಲಿ ಹೊಸದಾಗಿ ನಿರ್ಮಾಣವಾಗಿರುವ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ"

## ಸುದ್ದಿ-ಸೂಚನೆ

- 28-8-2011ರಂದು ಅಮರರವರ ಮಹಾಸಮಾಧಿ ಕಾರ್ಯಕ್ರಮವನ್ನು ತಪೋನಗರದಲ್ಲಿ ಆಯೋಜಿಸಲಾಗಿದೆ. ರಿಜಿಸ್ಟ್ರೇಶನ್‌ಗೆ ಕೊನೆಯ ದಿನಾಂಕ 25-8-2011.
- 28-8-2011ರಂದು ತಪೋನಗರದಲ್ಲಿ "Guruji Speaks Vol 4", "iGuruji - Vol 5", "New Age Realities" ಪುಸ್ತಕದ ಕನ್ನಡ ಅನುವಾದ ಹಾಗೂ ಅಧ್ಯಯನ ಕೇಂದ್ರದ ಪುಸ್ತಕದ ಬಿಡುಗಡೆ ಮಾಡಲಾಗುವುದು.
- 25-8-2011ರಂದು ಆನೇಕಲ್‌ನ ನಮ್ಮ ಸಪ್ತರ್ಷಿ ಧ್ಯಾನಕೇಂದ್ರದಲ್ಲಿ ಅಮರರವರ ಮಹಾಸಮಾಧಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.
- 25-8-2011ರಂದು ಆನೇಕಲ್‌ನ ನಮ್ಮ ಸಪ್ತರ್ಷಿ ಧ್ಯಾನಕೇಂದ್ರದಲ್ಲಿ ಆಯೋಜಿಸಿದ ಅಮರರವರ ಮಹಾಸಮಾಧಿ ಕಾರ್ಯಕ್ರಮದಲ್ಲಿ ಶ್ರೀಮತಿ ಚಂಪಾರವರು ಕನ್ನಡಕ್ಕೆ ಅನುವಾದಿಸಿರುವ "New Age Realities" ಪುಸ್ತಕದ ಬಿಡುಗಡೆಯನ್ನು ಮಾಡಲಾಗುವುದು.
- 15-7-2011ರಂದು ಗುರುಪೂರ್ಣಿಮಾ ವಿಶೇಷ ಧ್ಯಾನದಲ್ಲಿ 200ಕ್ಕೂ ಹೆಚ್ಚು ಧ್ಯಾನಿಗಳು ತಪೋನಗರದಲ್ಲಿ ಮತ್ತು ಸಪ್ತರ್ಷಿ ಧ್ಯಾನಕೇಂದ್ರ ಆನೇಕಲ್‌ನಲ್ಲಿ ಭಾಗವಹಿಸಿದ್ದರು.

## ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 07 ಭಾನು | ಶುಕ್ಲ ಅಷ್ಟಮಿ | |
| 08 ಸೋಮ | ಶುಕ್ಲ ದಶಮಿ | |
| 12 ಶುಕ್ರ | ಮಹಾಲಕ್ಷ್ಮಿ ಪೂಜೆ | |
| 13 ಶನಿ | ಪೂರ್ಣಿಮಾ | |
| 21 ಭಾನು | ಶ್ರೀಕೃಷ್ಣ ಜನ್ಮಾಷ್ಟಮಿ | |
| 25 ಗುರು | ಅಮರರವರ ಮಹಾಸಮಾಧಿ ದಿನ | |
| 27 ಶನಿ | ಮಾಸ ಶಿವರಾತ್ರಿ | |
| 28 ಭಾನು | ಅಮರರವರ ಪುಣ್ಯತಿಥಿ ಆಚರಣೆ | |
| 29 ಸೋಮ | ಅಮಾವಾಸ್ಯೆ | |
| 31 ಬುಧ | ಗೌರಿ ಪೂಜೆ | |

## ಅಮರರವರ ಪುಣ್ಯತಿಥಿ ಕಾರ್ಯಕ್ರಮ
### 28-8-2011, ಭಾನುವಾರ

ಬೆಳಿಗ್ಗೆ 11 ಕ್ಕೆ
ಸ್ವಾಗತ ಭಾಷಣ
ಭಾಷಣಗಳು
ಗುರೂಜಿಯವರ ನುಡಿಗಳು
ಪುಸ್ತಕಗಳ ಬಿಡುಗಡೆ
ವಿಶೇಷ ಧ್ಯಾನ
ಗುರೂಜಿಯವರಿಂದ ಆಶೀರ್ವಾದ
ಮಧ್ಯಾಹ್ನ 12.30ಕ್ಕೆ ಪ್ರಸಾದ

## ಈ ತಿಂಗಳು ತಪೋನಗರದಲ್ಲಿ

ಭಾನುವಾರಗಳು: ಉಪನ್ಯಾಸಗಳು : ಬೆಳಿಗ್ಗೆ 11-12
ವಿಶೇಷ ಧ್ಯಾನ & ಲೈಟ್ ಚಾನಲಿಂಗ್: ಮಧ್ಯಾಹ್ನ 12-1
21-08-11 ಶ್ರೀಕೃಷ್ಣ ಜನ್ಮಾಷ್ಟಮಿ
28-08-11 ಅಮರರವರ ಪುಣ್ಯತಿಥಿ ಆಚರಣೆ

## ಭಾನುವಾರದ ಪ್ರಸಾದವನ್ನು ಪ್ರಾಯೋಜಿಸಿದವರು

05-06-11 ಪ್ರತಿಭಾ ನವ್ವಾಕೆ, ಶಾಂತಾ ಲಕ್ಷ್ಮೀಕಾಂತ್ & ಅಮಿತ್ ಕಿಣಿ
12-06-11 ಹೇಮಾರೆಡ್ಡಿ, ಮಾಧವಮೂರ್ತಿ, ಶಂಕರ್ ರಾವ್ ಪೋತ್ದಾರ್ & ಅಂಜನಾ ಗುಪ್ತ
19-06-11 ಬಾರ್ಬರಾ ವಾನ್ ಗ್ರೂಟ್, ಶೈಲಜಾ ರಾವ್, ಸುಚಿತ್ರಾ ವೈದ್ಯ & ಅಂಜನಾ ಗುಪ್ತ
26-06-11 ಗಂಗಾಧರನ್, ಗೋಧಾ ಶ್ರೀನಾಥ್, ಶಾಂತಾ ಲಕ್ಷ್ಮೀಕಾಂತ್, ವಿನು ವರ್ಗೀಸ್ & ಸುಚಿತ್ರಾ ಜೀವನಂದಂ

**13-8-2011 ರಂದು ಬೆಳಿಗ್ಗೆ 11ರಿಂದ ಮಧ್ಯಾಹ್ನ 1ರವರೆಗೆ ಗುರೂಜಿಯವರೊಂದಿಗೆ 'ಅನೌಪಚಾರಿಕ ಸಭೆ' ಇರುತ್ತದೆ. ಭಾಗವಹಿಸಲು ಆಸಕ್ತಿ ಇರುವವರು ತಮ್ಮ ಹೆಸರನ್ನು ಆಫೀಸಿನಲ್ಲಿ ರಿಜಿಸ್ಟರ್ ಮಾಡಬೇಕು.**

ವಾರ್ತಾಪತ್ರದ ಮುದ್ರಣಕ್ಕೆ ರೂ. 5000 ಮತ್ತು ಭಾನುವಾರದ ಪ್ರಸಾದವನ್ನು ಪ್ರಾಯೋಜಿಸುವುದಕ್ಕೆ ರೂ. 2000.

## ಲೈಟ್ ಚಾನಲ್ ವಿಶ್ವಸಂಚಲನದ ಇತ್ತೀಚಿನ ಸುದ್ದಿ

ಲೈಟ್ ಚಾನಲಿಂಗ್ ಕಾರ್ಯ ಮೌನವಾಗಿ ವಿಸ್ತರಿಸುತ್ತಿದೆ. ಅದರ ಕಾರ್ಯಕರ್ತರು ತಮ್ಮ ಮಾಸ್ಟರ್‌ರ ಕನಸನ್ನು ನನಸಾಗಿಸಲು ಭಾವುಕರಾಗಿ ಕೆಲಸ ಮಾಡುತ್ತಿದ್ದಾರೆ. ಈ ಪ್ರಪಂಚ ಸಂಪೂರ್ಣವಾಗಿ ಶಾಂತಿ ಮತ್ತು ಪ್ರೀತಿಯಿಂದ ತುಂಬಿರುವುದು ಅವರ ಕನಸಾಗಿದೆ. ಈ ನಿಟ್ಟಿನಲ್ಲಿ ಶಾಲೆಗಳು ಹೆಚ್ಚಿನ ಸಹಾಯ ಮಾಡುತ್ತಿವೆ. ಒಂದು ಶಾಲೆಯಲ್ಲಿ ಪೋಷಕರು–ಅಧ್ಯಾಪಕರುಗಳ ಮೀಟಿಂಗ್ ಲೈಟ್ ಚಾನಲ್ ಸೆಷನ್‌ನೊಂದಿಗೆ ಆರಂಭವಾಯಿತು.

2011 ಜೂನ್ ತಿಂಗಳಲ್ಲಿ ನಮ್ಮ ಕಾರ್ಯಕರ್ತರು ಹೊಸದಾಗಿ 114 ಶಾಲೆಗಳಲ್ಲಿ ಸುಮಾರು 39,000 ಮಕ್ಕಳಿಂದ ಲೈಟ್ ಚಾನಲ್ ಮಾಡಿಸಿದ್ದಾರೆ. ಈವರೆಗೆ ಸುಮಾರು 17 ಲಕ್ಷಕ್ಕೂ ಹೆಚ್ಚು ಮಕ್ಕಳು ಲೈಟ್ ಚಾನಲ್ ಮಾಡಿದ್ದಾರೆ ಮತ್ತು ಪ್ರತಿದಿನ ಒಂದು ಲಕ್ಷಕ್ಕೂ ಹೆಚ್ಚು ಮಕ್ಕಳು ಅವರವರ ಶಾಲೆಗಳಲ್ಲಿ ಲೈಟ್ ಚಾನಲಿಂಗ್ ಮಾಡುತ್ತಿದ್ದಾರೆ.

ಮಧುರೈನಲ್ಲಿ ಒಂದು ಲೈಟ್ ಚಾನಲಿಂಗ್ ಕೇಂದ್ರ ಆರಂಭವಾಗಿದೆ ಮತ್ತು ಬೆಂಗಳೂರಿನಲ್ಲಿ ಮತ್ತೊಂದು ಕೇಂದ್ರ ಸೇರ್ಪಡೆಯಾಗಿದೆ. ■

## ಲೈಟ್ ಚಾನಲಿಂಗ್ ಅನುಭವಗಳು

ಬೆಂಗಳೂರು ನಗರದ ಶ್ರೀರಾಂಪುರದಲ್ಲಿರುವ ಕಾರ್ಪೋರೇಶನ್ ಬಾಲಕಿಯರ ಪ್ರೌಢಶಾಲೆಯ ಮಕ್ಕಳು 2010 ಜುಲೈ ತಿಂಗಳಿನಿಂದ ಪ್ರತಿದಿನ 10 ನಿಮಿಷಗಳ ಕಾಲ ಲೈಟ್ ಚಾನಲ್ ಮಾಡುತ್ತಿದ್ದಾರೆ. ಲೈಟ್ ಮಾಸ್ಟರ್‌ಗಳು, ಬೆಳಕು ಮತ್ತು ಗುರೂಜಿಯವರ ಕೃಪೆಯಿಂದ ಈ ಬಾರಿ ನಮ್ಮ ಶಾಲೆಯು SSLC ಪರೀಕ್ಷೆಯಲ್ಲಿ 92% ಫಲಿತಾಂಶವನ್ನು ಮತ್ತು ಕಾರ್ಪೋರೇಶನ್ ಶಾಲೆಗಳಲ್ಲೆಲ್ಲಾ ಮೊದಲನೆಯ ಸ್ಥಾನವನ್ನು ಪಡೆದಿದೆ.

– ಉಪ ಪ್ರಾಂಶುಪಾಲರು, ಮಹಾನಗರ ಪಾಲಿಕೆ ಗರ್ಲ್ಸ್ ಜ್ಯೂನಿಯರ್ ಕಾಲೇಜ್, ಶ್ರೀರಾಂಪುರ, ಬೆಂಗಳೂರು

ಲೈಟ್ ಚಾನಲಿಂಗ್ ಮಕ್ಕಳಲ್ಲಿ ತಾಳ್ಮೆ, ಏಕಾಗ್ರತೆ, ಸಹನೆ, ಶಿಸ್ತು ಮತ್ತು ನೆನಪಿನ ಶಕ್ತಿಯನ್ನು ಹೆಚ್ಚಿಸಿದೆ. ಮಕ್ಕಳ ಸ್ವಭಾವ ಮತ್ತು ನಡವಳಿಕೆಗಳಲ್ಲಿ ಕೂಡಾ ಹೆಚ್ಚಿನ ಬದಲಾವಣೆಗಳಾಗಿವೆ.

– ಬಿ. ಜಯಲಕ್ಷ್ಮಿ, ಸರ್ಕಾರಿ ಪ್ರೌಢ ಶಾಲೆ, ಶನಿಗುರುವನಹಳ್ಳಿ, ಬೆಂಗಳೂರು

ನನ್ನ ಗಣಿತ ಪರೀಕ್ಷೆಯಂದು ಕೊನೆಯಲ್ಲಿ ನಾನು ಇನ್ನೂ ಎರಡು ಲೆಕ್ಕಗಳನ್ನು ಮಾಡಬೇಕಿತ್ತು, ಆದರೆ ಕೇವಲ ಎರಡು ನಿಮಿಷಗಳು ಮಾತ್ರ ಉಳಿದಿತ್ತು. ಪ್ರಶ್ನೆಗಳು ಸುಲಭವಾಗಿದ್ದರೂ ಉತ್ತರಗಳು ತುಂಬಾ ಉದ್ದವಾಗಿದ್ದವು. ಆಗ ನಾನು ಬೆಳಕನ್ನು ಮತ್ತು ಬೆಳಕಿನ ಮಾಸ್ಟರ್‌ಗಳನ್ನು ಸಹಾಯಕ್ಕಾಗಿ ಪ್ರಾರ್ಥಿಸಿದೆ. ಪ್ರಶ್ನೆಗಳಿಗೆ ಉತ್ತರಿಸಿದ ನಂತರ ನನ್ನ ಕೈಗಡಿಯಾರ ನೋಡಿದಾಗ, ಅದು ಈ ಮೊದಲು ತೋರಿಸಿದ ಸಮಯವನ್ನೇ ತೋರಿಸುತ್ತಿತ್ತು! ನನಗೆ ನಿಜವಾಗಿಯೂ ಆಶ್ಚರ್ಯವಾಯಿತು! ನಾನು 85.5% ಅಂಕಗಳನ್ನು ಗಳಿಸಲು ಬೆಳಕು ಮತ್ತು ಬೆಳಕಿನ ಮಾಸ್ಟರ್‌ಗಳೇ ಕಾರಣ. ಅದಕ್ಕಾಗಿ ನಾನು ಅವರಿಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

– ರುಚಾ ನಾಸಿಕ್ಕರ್, ವಿದ್ಯಾರ್ಥಿ, ಮುಂಬೈ

## ತಪೋನಗರ ಡೈರಿ

**ಸೀಮಾ ಅಲ್‌ವೇಲ್ ಸೋಮಯಾಜಿ; ಅನು: ಪಾಂಡುರಂಗ**

ಅರ್ಧ ವಾರ್ಷಿಕ ಸೂಚಕವಾದ ಜೂನ್ ತಿಂಗಳು ಅನೇಕ ಮೈಲಿಗಲ್ಲುಗಳನ್ನು ಹೊಂದಿತ್ತು. ಈ ತಿಂಗಳ ಎರಡನೇ ದಿನವೇ ಮೊದಲನೆಯ ಮೈಲಿಗಲ್ಲಾದ ಸೂರ್ಯಗ್ರಹಣವಿತ್ತು. ಅದು ಬೆಳಕಿನಯುಗ ಬಿರುಸಾಗಿ ಮುನ್ನಡೆ ಸಾಧಿಸಲು ಜೂನ್ ತಿಂಗಳಲ್ಲಿದ್ದ ಎರಡು ಗ್ರಹಣಗಳಲ್ಲಿ ಮೊದಲನೆಯದು. ಈ ಎರಡು ಗ್ರಹಣಗಳ ಮಧ್ಯದಲ್ಲಿ ಆಂಜನೇಯ ಸ್ವಾಮಿ ದೇವಸ್ಥಾನದ ಉದ್ಘಾಟನೆಯಾಯಿತು.

ಈ ಸಂದರ್ಭದಲ್ಲಿ ಎರಡು ರೀತಿಯ ಸಮಾರಂಭಗಳಾದವು. ಗ್ರಾಮಸ್ಥರಿಗಾಗಿ ಮೂರು ದಿನಗಳ ವಿಧ್ಯುಕ್ತ ಆಚರಣೆಗಳಾದವು. ನಂತರ, ಬೆಳಕಿನ ವಿಧಾನದ ಆಚರಣೆ. ಆ ದಿನ ಸಪ್ತಋಷಿಗಳು ಆಗಮಿಸಿದ್ದರು ಮತ್ತು ಆಂಜನೇಯ ಸ್ವಾಮಿಯ ಅಂಶವನ್ನು ಆ ವಿಗ್ರಹದಲ್ಲಿ ಪ್ರತಿಷ್ಠಾಪಿಸಲಾಯಿತು. ಇಲ್ಲಿ ತಪೋನಗರ ನಿವಾಸಿಗಳು ಪ್ರತಿ ಶನಿವಾರ ಸಂಜೆ 7 ಘಂಟೆಗೆ ಸೇರಿ ಧ್ಯಾನ ಮಾಡುವರು ಮತ್ತು ಗ್ರಾಮಸ್ಥರೂ ಇದರಲ್ಲಿ ಜೊತೆಗೂಡಬಹುದು ಎಂದು ಗುರೂಜಿಯವರು ಹೇಳಿದರು.

ದೇವಸ್ಥಾನದ ಎತ್ತರದ ಶ್ವೇತವರ್ಣದ ಗೋಪುರ, ಹಿಮಾಚ್ಛಾದಿತ ಹಿಮಾಲಯ ಪರ್ವತಗಳನ್ನು ನೆನಪಿಗೆ ತರುತ್ತದೆ. 12 ಅಡಿ ಎತ್ತರದ ಪ್ರಶಾಂತಮೂರ್ತಿ ಆಂಜನೇಯ ಸ್ವಾಮಿಯ ಎರಡೂ ಪಾರ್ಶ್ವಗಳಲ್ಲಿ 5 ಅಡಿ ಎತ್ತರದ ಎರಡು ದೀಪಗಳು ರಾರಾಜಿಸುತ್ತಿವೆ. ದೇವಸ್ಥಾನದ ಮಹಾದ್ವಾರದ ಬಾಗಿಲನ್ನು ಗುರೂಜಿಯವರೇ ವಿನ್ಯಾಸಗೊಳಿಸಿದ್ದಾರೆ. ಈ ಬಾಗಿಲುಗಳನ್ನು ದೊಡ್ಡ ಗಾಜಿನಿಂದ ತಯಾರಿಸಲ್ಪಟ್ಟಿದ್ದು, ದೇವಸ್ಥಾನದ ಮುಂದೆ ಹಾದುಹೋಗುವವರೆಲ್ಲರೂ ಸ್ವಾಮಿಯ ದರ್ಶನ ಪಡೆಯಬಹುದಾಗಿದೆ.

ದೇವಸ್ಥಾನದ ಉದ್ಘಾಟನೆಯ ಆಹ್ವಾನ ಪತ್ರಿಕೆಗಳು, ಪ್ರಸಾದ ವಿನಿಯೋಗ, ಕಾರ್ಯಕ್ರಮ ಇತ್ಯಾದಿ ಎಲ್ಲವೂ ಗುರೂಜಿಯವರ ಮೇಲ್ವಿಚಾರಣೆಯಲ್ಲಿ ನಡೆಯಿತು. ಅವರ ಅಯಸ್ಕಾಂತೀಯ ಉತ್ಸಾಹ ಅಲ್ಲಿ ನೆರೆದಿದ್ದವರೆಲ್ಲರಿಗೂ ಮುಟ್ಟಿತು. ಆ ಮಹತ್ವದ ದಿನಕ್ಕಾಗಿ, ನಮ್ಮಲ್ಲಿ ಅನೇಕ ವರ್ಷಗಳಿಂದಲೂ ಇರುವ ಕೃಷ್ಣಪ್ಪ ಬಿಡುವಿಲ್ಲದೆ ದುಡಿದಿದ್ದಾರೆ.

ಈ ಮೈಲಿಗಲ್ಲುಗಳು ಒಂದು ಹಂತವೆನಿಸಿದರೆ, ಜೂನ್ ತಿಂಗಳು ತಪೋನಗರ ನಿವಾಸಿಗಳಿಗೆ ಒಂದು ಪರೀಕ್ಷೆಯ ಕಾಲ ಕೂಡ ಆಗಿತ್ತು. ಅದನ್ನು ಅವರು ಅಗಾಧವಾದ ಮೈತ್ರಿ, ಏಕತಾಭಾವ, ಕ್ಷಮೆ ಮತ್ತು ಅನಿರ್ಣಾಯಕ ಭಾವಗಳಿಂದ ಎದುರಿಸಿ ಜಯಶೀಲರಾದರು. ■

## ಲೈಟ್ ಚಾನಲ್ಸ್

**ವಿಶ್ವ ಸಂಚಲನ**

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ–ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆ ಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್ www.lightchannels.com ಗೆ ಬನ್ನಿ.

### ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡಬೇಕು.

## ಗುರೂಜಿಯವರ ನುಡಿಗಳು

(ಗುರೂಜಿಯವರ ಭಾನುವಾರದ ಉಪನ್ಯಾಸಗಳ ಸಂಗ್ರಹ)

(ಸಂಗ್ರಹ: ಶೋಭಾ ಕೆ. ರಾವ್; ಅನುವಾದ: ಶಿವಪ್ರಕಾಶ್ ಎಲ್)

05-06-2011

ಈ ಸೃಷ್ಟಿಯ ಹಿಂದೆ, ಬೆಳಕಿನ ಸಾಗರದ ಹಿಂದೆಯೂ ಕೂಡ, ಒಂದು ಅದ್ಭುತ ಬುದ್ಧಿಶಕ್ತಿ, ಒಂದು ಶ್ರೇಷ್ಠ ಅಸ್ತಿತ್ವವಿದೆ. ಇದು ದೇವರು. ಅವನು ನಮ್ಮೊಳಗೆ ಮತ್ತು ನಮ್ಮ ಸುತ್ತಮುತ್ತ ಇದ್ದಾನೆ. ಈ ವಾಸ್ತವತೆಯ ಅರಿವು ನಮಗಿರಲೇಬೇಕು. ನಮ್ಮ ಅರಿವಿನ ಹಿಂದೆ ಅವನಿದ್ದಾನೆ.

ಶಾಂತವಾಗಿ ಕುಳಿತುಕೊಳ್ಳಿ, ನಿಮ್ಮ ಅರಿವನ್ನು ವಿಸ್ತರಿಸಿ, ನಿಮ್ಮ ಪ್ರೀತಿಯನ್ನು ವಿಸ್ತರಿಸಿ, ನೀವು ದೇವರ ಅಸ್ತಿತ್ವವನ್ನು ಅರಿಯುವಿರಿ. ನೀವು ಸಂಪರ್ಕ ಪಡೆಯುವಿರಿ, ಆಗ ಪ್ರೀತಿಯ ಹರಿವನ್ನು ಕಾಣುವಿರಿ. ಮಾನವಪ್ರೇಮ ಅದ್ಭುತ, ಅಮೂಲ್ಯ ಮತ್ತು ವಿಸ್ಮಯಕರ. ಆದರೆ ಇದು ನಾವು ಎಂದೂ ಅನುಭವಿಸಿರದ ವಿಶಿಷ್ಟವಾದ ಪ್ರೀತಿ. ಪ್ರೀತಿಯೊಂದಿಗೆ ಚೈತನ್ಯ, ಜ್ಞಾನ ಇತ್ಯಾದಿ ಬರುತ್ತವೆ. ಇದ್ದಕ್ಕಿದ್ದಂತೆ ನಮ್ಮನ್ನು ರಕ್ಷಿಸುವ ಅಭಯಹಸ್ತವನ್ನು ಕಾಣುತ್ತೇವೆ. ಇದು ನಮಗೆ ತಿಳಿಯದ ಆದರೆ ನಮ್ಮ ಎಲ್ಲಾ ಜನ್ಮಾಂತರಗಳಲ್ಲಿ ನಮ್ಮೊಂದಿಗಿರುವ ನಮ್ಮ ಆಧ್ಯಾತ್ಮಿಕ ಪಿತೃ ಎಂಬುವುದನ್ನು ಮನಗಾಣುತ್ತೇವೆ. ಈ ಅಸ್ತಿತ್ವದ ಕ್ಷಣ ಮಾತ್ರದ ಅನುಭವ ನಮ್ಮ ಇಡೀ ಬದುಕನ್ನೇ ಮಾರ್ಪಡಿಸಲು ಸಾಕು. ಇದನ್ನು ಪ್ರಯತ್ನಿಸಿ. ನೀವು ಪ್ರಾಮಾಣಿಕ ಮತ್ತು ಸರಳವಾಗಿರಬೇಕು.

ಅಮೀಬಾದಿಂದ ದೇಹಗಳು ವಿಕಾಸಗೊಳ್ಳಲಾರಂಭಿಸಿದಾಗ, ಬೇರೆ ಲೋಕಗಳಿಂದ ಆತ್ಮಗಳು ಬಂದು ಅವುಗಳಲ್ಲಿ ಸೇರಿಕೊಂಡವು. ಅವು ದೇಹಗಳನ್ನು ಸುಧಾರಿಸಿದವು. ಬಹುಶಃ ಇದಕ್ಕೆ ಕೋಟಿಗಟ್ಟಲೆ ವರ್ಷಗಳು ತೆಗೆದುಕೊಂಡವು. ಈಗ ನಮ್ಮ ಚಿಂತನೆ, ಭಾವನೆಗಳು ಮತ್ತು ಜೀವನ ವಿಧಾನಗಳನ್ನು ಉತ್ತಮಪಡಿಸಿಕೊಳ್ಳುವ ಮೂಲಕ ಈ ವಿಕಾಸ ಕ್ರಿಯೆಯನ್ನು ಮುಂದುವರಿಸುವುದು ನಮ್ಮ ಕರ್ತವ್ಯ. ನಿಷ್ಠೆಯಿಂದ ಧ್ಯಾನ ಮಾಡಿ. ನಮ್ಮ ಮುಖ ಲಕ್ಷಣವೇ ಬದಲಾಗುತ್ತದೆ.

ನಮ್ಮಲ್ಲಿ ಅನೇಕರಿಗೆ ನಾನಾ ಅನುಭವಗಳಾಗಿವೆ, ಆದರೂ ಅವುಗಳ ಪರಿಣಾಮವನ್ನು ನಾವು ಕಾಣುತ್ತಿಲ್ಲ. ಏಕೆ? ಇವುಗಳ ಬಗ್ಗೆ ಚಿಂತಿಸಿ. ಇಂಥ ಪ್ರಶ್ನೆಗಳನ್ನು ಕೇಳಿಕೊಂಡಾಗ ಮತ್ತು ಆತ್ಮಾವಲೋಕನ ಮಾಡಿಕೊಂಡಾಗ ಮಾತ್ರ ನಾವು ಬೆಳೆಯಲು ಪ್ರಾರಂಭಿಸುತ್ತೇವೆ.

ಒಬ್ಬ ವ್ಯಕ್ತಿ ತಾನು ಒಬ್ಬ ಭಗವಾನರ ಬಳಿ ಹೋದುದಾಗಿಯೂ, ಅವನು ಆಕೆಗೆ, ನಿನಗೆ ಜ್ಞಾನೋದಯವಾಗಿದೆ ಎಂದು ಹೇಳಿದನು, ಎಂದು ತಿಳಿಸಿದರು. ಒಮ್ಮೆ, ಧ್ಯಾನವನ್ನು ಪ್ರದರ್ಶಿಸಲು ನನ್ನನ್ನು ಕೇಳಿದರು. ನಿಮ್ಮ ಧ್ಯಾನಗಳನ್ನು ಮತ್ತು ಜ್ಞಾನೋದಯವನ್ನು ಹೇಗೆ ಪ್ರದರ್ಶಿಸಲು ಸಾಧ್ಯ? ಈ ಪ್ರಶ್ನೆಗಳ ಬಗ್ಗೆ ನೀವು ಚಿಂತನೆ ಮಾಡಬೇಕು.

ನನ್ನ ಹುಟ್ಟುಹಬ್ಬದ ಆಚರಣೆಯ ಸಂದರ್ಭದಲ್ಲಿ ಕೆಲವು ಸಲ ಬಹಳ ವಯಸ್ಸಾದ ಜನರು ಮತ್ತು ಚಿಕ್ಕಮಕ್ಕಳಿರುವ ಜನರು ಕ್ಯೂ ಬಿಟ್ಟು ಆಶೀರ್ವಾದ ಪಡೆಯಲು ಬಂದರು. ಆದರೆ ಒಬ್ಬ ವ್ಯಕ್ತಿ ಈ ವಿಷಯದಲ್ಲಿ ಕೋಪಗೊಂಡು ನಮ್ಮ ಕಾರ್ಯಕರ್ತರು ಮತ್ತು ಟ್ರಸ್ಟಿಗಳೊಡನೆ ಬಹಳ ಒರಟಾಗಿ ನಡೆದುಕೊಂಡು ಜಗಳವಾಡಿದರು. ಅನೇಕ ವರ್ಷಗಳ ಧ್ಯಾನಾಭ್ಯಾಸದ ಪ್ರಭಾವ ಎಲ್ಲಿ ಹೋಯಿತು? ಏನಾಯಿತು?

ಭ್ರಷ್ಟತೆಯ ವಿರುದ್ಧ ಹೋರಾಟ ಮುಂದುವರಿದಿದೆ. ಇದರಿಂದ ಬಹಳ ಒಳ್ಳೆಯ ಪರಿಣಾಮಗಳುಂಟಾಗಿವೆ. ಸತ್ಯಯುಗದ ಚೈತನ್ಯಗಳ ಪ್ರಭಾವ, ಈ ಭೂಮಿಯ ಮೇಲೆ ಅನೇಕರಿಂದ ಚಾನಲ್ ಆದ ಚೈತನ್ಯಗಳು ಮತ್ತು ಮೂರು ಸರಣಿ ಗ್ರಹಣಗಳಿಂದ ಬಿಡುಗಡೆಗೊಂಡ ಚೈತನ್ಯಗಳು ಈ ತುಮುಲವನ್ನು ಉಂಟುಮಾಡಿವೆ. ನಿಜಸ್ಥಿತಿ ಎಂದರೆ ಎಲ್ಲೆಲ್ಲಿ ನೋಡಿದರೂ ಭ್ರಷ್ಟತೆ ಇದೆ. ಮಾನಸಿಕವಾಗಿ ಇದನ್ನು ತಿರಸ್ಕರಿಸೋಣ, ಭ್ರಷ್ಟತೆಯಲ್ಲಿ ತೊಡಗಿರುವವರಿಗೆ ಬೆಳಕನ್ನು ಕಳುಹಿಸೋಣ ಮತ್ತು ಪರಿಸ್ಥಿತಿ ಬದಲಾವಣೆಯಾಗುತ್ತದೆ ಎಂದು ಭರವಸೆಯನ್ನು ಹೊಂದಿರೋಣ.

ಧ್ಯಾನಗಳು ಒಬ್ಬ ವ್ಯಕ್ತಿಯನ್ನು ಕೋಪಿಸಿಕೊಳ್ಳುವುದರಿಂದ ಅಥವಾ ಕಿರುಚಾಡುವುದರಿಂದ ಏಕೆ ತಡೆಯುವುದಿಲ್ಲ? ಅರ್ಧ ಘಂಟೆ ಧ್ಯಾನ ಮಾಡಿದ ನಂತರ ಒಬ್ಬ ವ್ಯಕ್ತಿ ತನಗೆ ನೆಗಡಿ ಬಂದಿತೆಂದು ಏಕೆ ಯೋಚಿಸುತ್ತಾನೆ? ನಿಮಗೆ ಯಾವುದು ಆಧ್ಯಾತ್ಮಿಕತೆ ಎಂಬುದು ಅರ್ಥವಾಗಲಿ ಎನ್ನುವುದಕ್ಕಾಗಿ ನಾನು ಈ ವಿಷಯಗಳನ್ನು ಪ್ರಸ್ತಾಪಿಸುತ್ತಿದ್ದೇನೆ. ಈ ಪ್ರಶ್ನೆಗಳನ್ನು ನಮ್ಮನ್ನು ನಾವೇ ವ್ಯಕ್ತಿಗತವಾಗಿ ಕೇಳಿಕೊಳ್ಳಬೇಕು. ಇಂಥ ಪ್ರಶ್ನೆಗಳಿಂದ ಪಾಠ ಕಲಿಯೋಣ, ಆದರೆ ಯಾರನ್ನೂ ಖಂಡಿಸುವುದು ಅಥವಾ ಇಷ್ಟೇ ಎಂದು ನಿಷ್ಕರ್ಷೆ ಮಾಡುವುದು ಬೇಡ. ಎಲ್ಲರನ್ನೂ ಪ್ರೀತಿಸೋಣ, ಈ ಪ್ರಪಂಚವನ್ನು ಪ್ರೀತಿಸೋಣ.

12-06-2011

ನಾನು ಪ್ರತಿಸಲ ಧ್ಯಾನದ ತರಗತಿಯಲ್ಲಿ ಮಾತನಾಡಿದಾಗ ಪ್ರತಿ ಸಲವೂ ಅಗಾಧ ಪ್ರಮಾಣದಲ್ಲಿ ಚೈತನ್ಯಗಳು ಬಿಡುಗಡೆಯಾಗುತ್ತವೆ. ಇಲ್ಲಿ ಇರುವವರು, ವೆಬ್‌ಕಾಸ್ಟ್ ಮುಖಾಂತರ ಅಥವಾ ಡಿ.ವಿ.ಡಿ. ಮೂಲಕ ನೋಡುವವರು ಎಲ್ಲರೂ ಈ ಚೈತನ್ಯಗಳನ್ನು ಪಡೆಯುತ್ತಾರೆ. ಈ ವಿಷಯವನ್ನು ನೀವೆಲ್ಲ ತಿಳಿದಿರಬೇಕೆಂದು ನಾನು ಬಯಸುತ್ತೇನೆ.

"ನಾನು ಯಾರು?" ಇದು ರಮಣ ಮಹರ್ಷಿಯವರ ಆತ್ಮಶೋಧನೆಯ ವಿಧಾನ. ಇದನ್ನು ನಾವು ಬುದ್ಧಿಶಕ್ತಿಯ ಹಂತದಿಂದ ಅನುಸರಿಸಬೇಕು, ನಂತರ ಅನುಭಾವದ ಕ್ಷೇತ್ರಗಳಲ್ಲಿ ನಾವು ಯಾರೆಂಬುದನ್ನು ಅನುಭವಿಸಬೇಕು. ನಾವು ಆತ್ಮಗಳು. ಋಷಿಗಳೊಡನೆ ಏಕೆ ಇಲ್ಲಿ ಇದ್ದೇವೆ? ಧ್ಯಾನಗಳಲ್ಲಿ ಸ್ವಲ್ಪ ಕಾಲವನ್ನು ಕಳೆದ ನಂತರ, ಆಗಿಂದಾಗ್ಗೆ ನಾವು ನಿಜವಾಗಿ ಪ್ರಗತಿಯನ್ನು ಸಾಧಿಸಿದ್ದೇವೆಯೆ ಅಥವಾ ನಿಜವಾಗಿಯೂ ಅರ್ಥಮಾಡಿಕೊಂಡಿದ್ದೇವೆಯೆ ಎಂದು ನಮ್ಮನ್ನು ನಾವು ಪ್ರಶ್ನಿಸಿಕೊಳ್ಳಬೇಕು. ಸ್ವಲ್ಪಕಾಲದ ಅಂತರದಲ್ಲಿ ಪ್ರತಿಸಲ ಈ ಪ್ರಶ್ನೆಯನ್ನು ಕೇಳಿದಾಗ, ನಾವು ಉತ್ತರಗಳಲ್ಲಿ ಒಂದು ರೀತಿಯ ವಿಸ್ತಾರವನ್ನು ಕಾಣಬಹುದು, ಹೊಸ ವಸ್ತುವಿಶೇಷಗಳನ್ನು, ಹೊಸಬೆಳಕನ್ನು ಕಾಣಬಹುದು. ಇದೇ ಸಾಧನೆ. ಬುದ್ಧಿಶಕ್ತಿಯ ಅಭ್ಯಾಸಗಳು ಮತ್ತು ಅನುಭಾವದ ಕ್ಷೇತ್ರಗಳಲ್ಲಿನ ಪಯಣಗಳು ಕೂಡಾ ಸಾಧನೆಯ ಭಾಗವಾಗುತ್ತವೆ.

ಗ್ರಹಣಗಳಿಂದ ಬಿಡುಗಡೆಯಾದ ಹೊಸ ಚೈತನ್ಯಗಳು ಎಲ್ಲ ಹಂತಗಳಲ್ಲಿ ಹೊಸ ಅವಕಾಶಗಳನ್ನು ಮೂಡಿಸಿದೆ. ಪ್ರಜ್ಞೆಯಲ್ಲಿ ಒಂದು ಸ್ಥಿತ್ಯಂತರವಾಗಿದೆ. ಈ ಸ್ಥಿತ್ಯಂತರದ ಚೈತನ್ಯಗಳು, ಫೋಟಾನ್ ಬೆಲ್ಟ್ ಮತ್ತು ಅದರ ಪ್ರಭಾವಲಯದ ಚೈತನ್ಯಗಳು, ರಾ-ಚೈತನ್ಯಗಳು ನಮ್ಮಲ್ಲಿ ಬದಲಾವಣೆಗಳನ್ನು ತರುವುದಿಲ್ಲ ಏಕೆಂದರೆ ನಮಗೆ ಇಚ್ಛಾಸ್ವಾತಂತ್ರ್ಯದ ಶಾಪವಿದೆ. ನಾವು ಆಯ್ಕೆ ಮಾಡಬೇಕು, ಪರಿವರ್ತನೆ ಆಗಬೇಕು, ಚೈತನ್ಯಗಳು ನಮಗೆ ಅವಕಾಶಗಳನ್ನು ಮಾತ್ರ ಒದಗಿಸುತ್ತವೆ ಮತ್ತು ಸಲಹೆ, ಸೂಚನೆ ನೀಡುತ್ತವೆ.

ಭ್ರಷ್ಟತೆಯ ವಿರುದ್ಧ ಹೋರಾಡುತ್ತಿರುವವರು ಕೆಲಸಗಳನ್ನು ಅಸ್ತವ್ಯಸ್ತಗೊಳಿಸಿದ್ದಾರೆ, ಕಾರಣ ಅವರು ವೈಯಕ್ತಿಕ ಕಾರ್ಯರೂಪರೇಷೆಗಳನ್ನು ಹೊಂದಿದ್ದಾರೆ. ಭ್ರಷ್ಟತೆಯ ವಿರುದ್ಧದ ಹೋರಾಟ ನಿರರ್ಥಕವಾಗಿದೆ. ಸಾಧನೆಯಲ್ಲಿ ವೈಯಕ್ತಿಕ ಕಾರ್ಯಯೋಜನೆಗಳಿದ್ದರೆ ನಾವು ಯಶಸ್ವಿಯಾಗುವುದಿಲ್ಲ. ಜನರು ವಿಫಲರಾಗುತ್ತಾರೆಯೇ ಹೊರತು ಚೈತನ್ಯಗಳಲ್ಲ. ಬೆಳಕಿನ ಕಾರ್ಯ ಅತ್ಯಂತ ಶಕ್ತಿಯುತವಾಗಿ ಮತ್ತು ದಕ್ಷತೆಯಿಂದ ಸಾಗುತ್ತಿದೆ. ನಾವು ಬೆಳಕನ್ನು ಚಾನಲ್ ಮಾಡುವುದನ್ನು ಮುಂದುವರೆಸೋಣ, ನಾವು ನಿರ್ದಿಷ್ಟ ಜನರಿಗೆ, ನಾಯಕರಿಗೆ ಬೆಳಕನ್ನು ಚಾನಲ್ ಮಾಡೋಣ.

ಪ್ರತಿಯೊಬ್ಬರೂ ವಿಶಿಷ್ಟ ವ್ಯಕ್ತಿಯೇ. ಪ್ರತಿಯೊಬ್ಬರೂ ನನಗೆ ಅತ್ಯಂತ ಹತ್ತಿರದವರು, ಪ್ರತಿಯೊಬ್ಬರೂ ಋಷಿಗಳಿಗೆ, ಮೇಲ್ವಿಚಾರಣೆ ಮಾಡುವ ಬುದ್ಧಿಶಕ್ತಿಗಳಿಗೆ ಮತ್ತು ದೇವರಿಗೆ ಹತ್ತಿರದವರು. ನಮ್ಮ ಪ್ರತಿಯೊಂದು ಪ್ರಯತ್ನಕ್ಕೆ ಅವರು ಸಹಾಯ ಮಾಡುತ್ತಾರೆ. ನಮಗೆ ಇದರ

## ಗುರೂಜಿಯವರ ನುಡಿಗಳು

(ಗುರೂಜಿಯವರ ಭಾನುವಾರದ ಉಪನ್ಯಾಸಗಳ ಸಂಗ್ರಹ)

(ಸಂಗ್ರಹ: ಶೋಭಾ ಕೆ. ರಾವ್; ಅನುವಾದ: ಶಿವಪ್ರಕಾಶ್ ಎಲ್)

ಅರಿವಿರಬೇಕು ಮತ್ತು ನಾವು ದೇವರ ಮಕ್ಕಳಂತೆ ಬಾಳಬೇಕು. ನಾನು ಇದನ್ನು ಹೇಳುತ್ತಿರುವುದಕ್ಕೆ ಕಾರಣ ನಮ್ಮಲ್ಲಿ ಅನೇಕ ಸಲ ಕಾಣಿಸಿಕೊಳ್ಳುವ ಒಂದು ರೀತಿಯ ಸ್ವ-ನಿರಾಕರಣೆ. ನಮಗೆ ಅತ್ಯಂತ ಸಮೀಪದವನೆಂದರೆ ದೇವರು, ಅವನು ನಮ್ಮೊಳಗಿದ್ದಾನೆ. ಇಂಥ ಸತ್ಯಗಳ ಬಗ್ಗೆ ನಾವು ಚಿಂತನೆ ಮಾಡುವುದನ್ನು ಮುಂದುವರಿಸಬೇಕು, ಆಗ ಜೀವನ ಸುಂದರವಾಗುತ್ತದೆ.

19-06-2011

ಪ್ರತಿಸಲ ನಾವು ಇಲ್ಲಿಗೆ ಬಂದಾಗ, ಋಷಿಗಳ ಮುಂದೆ ನಾವು ಈಗ ಕುಳಿತಿರುವಂತೆ ಕುಳಿತುಕೊಂಡಾಗ, ಇಲ್ಲಿರುವವರಿಗೆ ಮತ್ತು ವೆಬ್‌ಕಾಸ್ಟ್ ನೋಡುತ್ತಿರುವವರಿಗೆ, ಅದೊಂದು ದೀಕ್ಷೆ. ಋಷಿಯ ಉಪಸ್ಥಿತಿ ಉನ್ನತೀಕರಿಸುತ್ತದೆ. ಇದನ್ನು ನಾವು ಅರಿಯಬೇಕು, ಒಪ್ಪಿಕೊಳ್ಳಬೇಕು. ನಾವು ಪ್ರಜ್ಞಾಪೂರ್ವಕವಾಗಿ ಮೇಲೇರಲು ಪ್ರಯತ್ನಿಸಬೇಕು.

ಅಮರರು ವಿವರಿಸಿದಂತೆ 'ಸಮಾದಿ' ಎಂದರೆ: 'ಪ್ರಾರಂಭದಲ್ಲಿ, ದೇವರೊಂದಿಗೆ ನಾವು ಒಂದಾಗಿದ್ದೆವು, ನಾವು ದೇವರಂತೆ ಇದ್ದೆವು.' 'ಸಮಾದಿ' ಎಂಬುದೊಂದು ಸ್ಥಿತಿ. ನಂತರದಲ್ಲಿ ಹೇಗೋ 'ಸಮಾದಿ'ಗೆ ಬದಲು ತಪ್ಪಾಗಿ 'ಸಮಾಧಿ' ಪದವನ್ನು ಜನರು ಬಳಸಲಾರಂಭಿಸಿದರು. ಈಗ 'ಸಮಾಧಿ' ಪದ ಬಳಸುವುದೇ ಸೂಕ್ತ. ಅದನ್ನು ತಿದ್ದಿದರೆ ಗೊಂದಲ, ವಾಗ್ವಾದಗಳು ಹುಟ್ಟಿಕೊಳ್ಳಬಹುದು. ನಾವು ಬೆಳೆಯುವುದರಲ್ಲಿ ಮತ್ತು ಬೇರೆಯವರು ಬೆಳೆಯುವುದಕ್ಕೆ ಸಹಾಯ ಮಾಡುವುದರಲ್ಲಿ ಆಸಕ್ತಿ ಹೊಂದಿದ್ದೇವೆ. ಇಂಥ ವಿಷಯಗಳ ಬಗ್ಗೆ ನಾವು ಒಂದೆಡೆ ಕುಳಿತು ವಿಚಾರ ಮಾಡಬೇಕಾಗಿದೆ.

ಇತ್ತೀಚೆಗೆ ಟೈಮ್ಸ್ ಆಫ್ ಇಂಡಿಯ ಪತ್ರಿಕೆಯಲ್ಲಿ ಚೇತನ್ ಭಗತ್ ಅವರು, ಯೋಗಿಯಾದವನಿಗೆ ಕೋಪ ಬರುವುದಿಲ್ಲ, ಎಂದು ಬರೆದಿದ್ದರು. ಇದು ಎಷ್ಟೊಂದು ಸರಿ! ಒಬ್ಬ ಧ್ಯಾನಿ ಕೋಪಗೊಳ್ಳುವುದಿಲ್ಲ. ಅವನು ಯಾವಾಗಲೂ ಶಾಂತಿಯನ್ನು ಹೊಂದಿರುತ್ತಾನೆ. ಅವರ ಪ್ರತಿಯೊಂದು ನಡೆ, ಪ್ರತಿಯೊಂದು ಆಲೋಚನೆ, ಭಾವೋದ್ವೇಗಗಳು ದೈವಿಕ, ಗೌರವಪೂರ್ಣ ಮತ್ತು ಘನಗಾಂಭೀರ್ಯವಾಗಿರುತ್ತದೆ. ನೀವು ಶಾಂತಿಯಿಂದ ಇದ್ದರೆ, ನಿಮ್ಮ ಮೂಲಕ ಪ್ರೀತಿ ಪ್ರವಹಿಸುತ್ತದೆ, ದೇವರು ನಿಮ್ಮ ಮೂಲಕ ಮಾತನಾಡುತ್ತಾನೆ. ನೀವು ಋಷಿಗಳನ್ನು ಪ್ರತಿನಿಧಿಸುತ್ತೀರಿ ಎಂಬ ಅರಿವಿರಲಿ. ಋಷಿಗಳು ಹಿಮಾಲಯದಂತೆ ಶಕ್ತಿಯುತ ಮತ್ತು ಘನಗಂಭೀರ.

ದಿನಾಂತ್ಯದ ವೇಳೆಗೆ, ಹಾಸಿಗೆಗೆ ಹೋಗುವ ಮೊದಲು ಒಬ್ಬ ವ್ಯಕ್ತಿ ಅಧಿಕಾರಿಯಾಗಲಿ, ವಾಣಿಜ್ಯೋದ್ಯಮಿಯಾಗಲಿ, ಒಬ್ಬ ರಾಜ ಅಥವಾ ರಾಣಿಯಾಗಲಿ ಅವರ ಪದವಿ, ಸ್ಥಾನ ಏನೇ ಆಗಿರಲಿ ಅವರು ಒಬ್ಬ ಮಾನವ ಜೀವಿ ಮಾತ್ರ. ಆ ಸಮಯದಲ್ಲಿ ಪ್ರಜ್ಞೆಯ ಕನ್ನಡಿಯಲ್ಲಿ ನೋಡಿಕೊಂಡು ಆ ದಿನದ ಬಳಕೆಯ ಬಗ್ಗೆ ಪ್ರಶ್ನಿಸಿಕೊಳ್ಳಿ, ನಿಮಗೆ ಆಕಾಶವನ್ನು ಎಷ್ಟು ಅನುಭವಿಸಲು ಸಾಧ್ಯವಾಯಿತು? ಮಾನವ ಜೀವಿಯಾಗಿ ಜೀವನವನ್ನು ಅನುಭವಿಸುವುದೇ ಆಧ್ಯಾತ್ಮಿಕತೆ. ಕಾಲ ಪ್ರತಿಯೊಬ್ಬರನ್ನೂ, ಧ್ಯಾನ ಮಾಡದೇ ಇರುವವರನ್ನೂ ಸಹ ಹೊಸಯುಗದೊಳಕ್ಕೆ ಸೆಳೆದುಕೊಳ್ಳುತ್ತಿದೆ.

ಒಬ್ಬ ಧ್ಯಾನಿ ಮನೋವೈದ್ಯರ ಬಳಿಗೆ ಹೋಗಿದ್ದರು, ಅವರಿಗೆ ಆಲಸ್ಯ, ಖಿನ್ನತೆಯಂತಹ ಸಮಸ್ಯೆಗಳಿದ್ದವು. ಮನೋವೈದ್ಯರು ಧ್ಯಾನ ಮಾಡುವುದು ಪಲಾಯನವಾದ ಎಂದು ಹೇಳಿ ಧ್ಯಾನಾಭ್ಯಾಸ ನಿಲ್ಲಿಸಬೇಕೆಂದು ಸಲಹೆ ನೀಡಿದರಂತೆ. ಇಂಥ ಸಮಸ್ಯೆಗಳಿಗೆ ಪರಿಹಾರವನ್ನು ನಾವೇ ಕಂಡುಕೊಳ್ಳಬೇಕು. ನೀವು ಸೋಮಾರಿತನ ಎನಿಸಿದರೆ ಪಟ್ಟುಹಿಡಿಯಿರಿ, ನಿಮ್ಮ ದೇಹವನ್ನು ಪುಸಲಾಯಿಸಿ, ಒತ್ತಾಯ ಮಾಡಿ, ಆದರೆ ಧ್ಯಾನ ಮಾಡಿ. ಇದು ಸಾಧ್ಯವಿದೆ.

26-06-2011

ನಾವು ಸತ್ಯದ ಅನ್ವೇಷಕರು. ಸತ್ಯದ ಬೆನ್ನಟ್ಟಿ ಹೋಗುವುದು ಸಾಧನೆ. ನಾವು ಸತ್ಯದೊಡನೆ ವಿಲೀನವಾದಾಗ ಸಾಧನೆ ಮುಗಿಯುತ್ತದೆ. ನಾವು ಒಂದು ವಿಶಿಷ್ಟ ಗುಂಪು, ನಾವು 51,000 ವರ್ಷಗಳಿಗೊಮ್ಮೆ ಋಷಿಗಳ ಆಶ್ರಯದಲ್ಲಿ ಸೇರುತ್ತೇವೆ. ಇದರ ಬಗ್ಗೆ ತಿಳಿದು ಹೆಮ್ಮೆಪಡೋಣ.

ಕೆಲವು ಜನರು ಕೆಲಸ ಮಾಡಲು ಆಯ್ಕೆ ಮಾಡಿಕೊಳ್ಳುತ್ತಾರೆ. ಕೆಲಸದಿಂದ ಹಿಂದೆ ಸರಿದ ಜನರು ಮತ್ತೆ ವಿದ್ಯಾರ್ಥಿಗಳಾಗಿ ಸೇರಿಕೊಳ್ಳಬಹುದು, ಆದರೆ ಮತ್ತೆ ಕೆಲಸಕ್ಕೆ ಸೇರಿಕೊಳ್ಳಲಾಗುವುದಿಲ್ಲ, ಕಾರಣ ಅವರ ಜಾಗದಲ್ಲಿ ಋಷಿಗಳು ಬೇರೆಯವರನ್ನು ತೆಗೆದುಕೊಂಡಿರುತ್ತಾರೆ. ಈ ಸಪ್ತಋಷಿಗಳ ಕೇಂದ್ರ ಯಾವಾಗಲೂ ಅಮರರಿಂದ ಪ್ರಾರಂಭವಾಗಿ ನನ್ನಿಂದ ಮತ್ತು ಇತರರಿಂದ ಮುಂದುವರಿಯುತ್ತದೆ. ಕೆಲಸವನ್ನು ಆಯ್ಕೆ ಮಾಡಿಕೊಂಡವರಿಗೆ ಯಾವುದೇ ಸ್ಥಳಕ್ಕೆ, ವಿಚಾರಗಳಿಗೆ, ತತ್ವಕ್ಕೆ ಅಂಟಿಕೊಳ್ಳದ ಹಾಗೆ ತರಬೇತಿ ಕೊಡಲಾಗುತ್ತದೆ. ಅವರು ಋಷಿಗಳ ಮುಂದೆ ಎಲ್ಲವನ್ನೂ ಸಮರ್ಪಿಸುತ್ತಾರೆ. ಅವರು ವೈಯಕ್ತಿಕ ಕಾರ್ಯಕ್ರಮದ ಲವಲೇಶವನ್ನೂ ಹೊಂದಿರಬಾರದು, ಇಲ್ಲವಾದರೆ ಅವರಿಗೆ ಕೆಲಸ ಮಾಡಲಾಗುವುದಿಲ್ಲ. ಒಂದು ವೇಳೆ ಅಂಥ ಕಾರ್ಯಕ್ರಮ ಇದ್ದರೆ, ಅದನ್ನು ಸರಿಪಡಿಸಲಾಗುವುದು.

ತಪೋನಗರ ಒಂದು ಅದ್ಭುತ ಚೈತನ್ಯ, ಅದ್ಭುತ ಅವಕಾಶಗಳು ಮತ್ತು ಅದು ಅನೇಕ ವಿಷಯಗಳಿಗೆ ಮೂಲವಾಗಿದೆ. ನೀವು ಯಾವಾಗಲೂ 'ತಪೋನಗರ'ವನ್ನು ಹೊಂದಿರಬೇಕು ಅಥವಾ ಸಂಪರ್ಕಿಸಬೇಕು ಮತ್ತು ಚೈತನ್ಯಗಳನ್ನು ತೆಗೆದುಕೊಳ್ಳಬೇಕು. ನೀವು ಎಲ್ಲೇ ಇದ್ದರೂ ಬೆಳೆಯಲು ಮತ್ತು ಕೆಲಸ ಮಾಡಲು ಅವಕಾಶಗಳಿವೆ.

2012ರ ಘಟನೆಗಳಿಂದ ನಮಗೆ ಎಷ್ಟರಮಟ್ಟಿಗೆ ತೊಂದರೆಯುಂಟಾಗುತ್ತವೆ ಎಂಬುದು ನಮಗೆ ತಿಳಿದಿಲ್ಲ. ಮದುವೆಯ ಬಗ್ಗೆ ನಿರ್ಧಾರಗಳು, ಮಕ್ಕಳನ್ನು ಪಡೆಯುವುದು, ಮುಂತಾದವು ಬಹಳ ವೈಯಕ್ತಿಕ ವಿಷಯಗಳು ಮತ್ತು ಇವುಗಳ ಬಗ್ಗೆ ನಿರ್ಧಾರಗಳನ್ನು ನೀವೇ ತೆಗೆದುಕೊಳ್ಳಬೇಕು.

ಒಬ್ಬ ವ್ಯಕ್ತಿ 'ಶಂಬಲ ನಿಯಮಗಳ ಅಭ್ಯಾಸ' ಪುಸ್ತಕವನ್ನು ಹಿಡಿದುಕೊಂಡಿದ್ದಾಗ ಆಕೆಗೆ ಅಪಾರ ಆನಂದವೆನಿಸಿತು ಮತ್ತು ಆಕೆಯ ಚರ್ಮ ಹೊಳೆಯುತ್ತಿರುವಂತೆ ತೋರಿತಂತೆ. ಇದೊಂದು ಅಸಾಮಾನ್ಯ ಅನುಭವ. ಆ ಪುಸ್ತಕದಲ್ಲಿನ ಚೈತನ್ಯಗಳ ಬುದ್ಧಿಶಕ್ತಿಯಲ್ಲಿರುವ ಪ್ರೇಮ ಆಕೆಗೆ ಈ ಅದ್ಭುತ ಅನುಭವವನ್ನು ನೀಡಿದೆ.

ಋಷಿಗಳಿಂದ ಒಂದು ಸೂಚನೆ: ಆಲೋಚನೆಗಳಿಂದ ನಿಮಗೆ ಅಡಚಣೆಯುಂಟಾದರೆ ನಿಮ್ಮ ಅರಿವನ್ನು ಬೆಳಕಿನ ಸಾಗರದೆಡೆಗೆ ಬದಲಾಯಿಸಿ.

ಹೀಲಿಂಗ್ ಚೈತನ್ಯಗಳು ತಮಗೆ ಸಹಾಯ ಮಾಡಿದವು ಎಂಬುದನ್ನು ಬೇರೆಯವರು ಒಪ್ಪಿಕೊಳ್ಳುವುದಕ್ಕೆ ನಾವು ಒತ್ತಾಯ ಮಾಡಬಾರದು ಮತ್ತು ನಿರೀಕ್ಷಿಸಬಾರದು. ಒಂದು ಅವಕಾಶವನ್ನು ದೊರಕಿಸುವ ರೀತಿಯಲ್ಲಿ ಅವರಿಗೆ ಧ್ಯಾನದ ಬಗ್ಗೆ ಹೇಳಬಹುದು. ಧ್ಯಾನವನ್ನು ಕೈಗೆತ್ತಿಕೊಳ್ಳುವುದು ವ್ಯಕ್ತಿಗೆ ಸೇರಿದ ವಿಷಯ.

ನೀವು ಪ್ರತಿಯೊಬ್ಬರೂ ಋಷಿಗಳನ್ನು, ರಾ-ಚೈತನ್ಯಗಳನ್ನು, ಫೋಟಾನ್ ಬೆಲ್ಟ್, ರಾ-ಬ್ರಹ್ಮ - ಇವುಗಳನ್ನು ಸಂಪರ್ಕಿಸಬೇಕೆಂದು ಬಯಸುತ್ತೇನೆ. ಅಂಥ ಪ್ರಾಮಾಣಿಕ ಬೇಡಿಕೆಯೊಂದಿಗೆ ನನ್ನ ಬಳಿಗೆ ಯಾರಾದರೂ ಬಂದರೆ, ಅವರಿಗೆ ತರಬೇತಿ ನೀಡಲು ಬೇಕಾದ ಜ್ಞಾನವನ್ನು ನಾನು ಋಷಿಗಳಿಂದ ಪಡೆಯಬಲ್ಲೆ. ಯಶಸ್ವಿ ಸಂಪರ್ಕಕ್ಕೆ ಒಂದೇ ಒಂದು ಷರತ್ತು: ನಿಜವಾದ ಪ್ರೀತಿಯನ್ನು ತೋರಿಸುವುದು. ■

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರುವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲಿಷ್‌ನಲ್ಲಿ (ವರ್ಷಕ್ಕೆ ರೂ. 1000/–), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 700/–) ಪಾಠಗಳನ್ನು ಕಳುಹಿಸಲಾಗುವುದು.

ವಾರ್ಷಿಕ ಫೀನಲ್ಲಿ ಪಠ್ಯ ಪುಸ್ತಕಗಳು ಮತ್ತು ವಾರ್ತಾಪತ್ರಿಕೆಯ ಒಂದು ವರ್ಷದ ಚಂದಾ ಸೇರಿರುತ್ತದೆ.

- ★ ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
- ★ ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ★ ಎಲ್ಲಾ ಪ್ರಶ್ನೆಗಳಿಗೆ ಮತ್ತು ಸಂದೇಹಗಳಿಗೆ ಗುರೂಜಿಯವರೇ ಉತ್ತರಿಸುತ್ತಾರೆ.
- ★ ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ★ ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು "ಮಾನಸ ಲೈಟ್ ಏಜ್ ಫೌಂಡೇಶನ್(ರಿ)" ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

## ಗುರೂಜಿಯವರಿಂದ ವಿಶೇಷ ಸೂಚನೆಗಳು

- ★ ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ★ ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ★ ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ★ ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ★ ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಮಾಸ್ಟರ್ ಅಮರ

(ಶ್ಯಾಮಲಾದೇವಿ)

ವಿಶ್ವದ ಶ್ರೇಷ್ಠ ಮಾಸ್ಟರ್‌ಗಳಾದ ಸಪ್ತಋಷಿಗಳ ಜೊತೆ ಕೆಲಸ ಮಾಡುತ್ತಿದ್ದ ಅಮರರವರು ಒಬ್ಬ ಶ್ರೇಷ್ಠ ಮಾಸ್ಟರ್ ಆಗಿದ್ದರು. 51000 ವರ್ಷಗಳಿಗೊಮ್ಮೆ ಬರುವ ಸ್ಥಿತ್ಯಂತರ ಕಾಲದಲ್ಲಿ ಸ್ಥಾಪಿತವಾಗುವ 'ಸಪ್ತರ್ಷಿ ಕೇಂದ್ರ'ವನ್ನು ಪ್ರಾರಂಭ ಮಾಡುವವರು ಇವರೇ ಮತ್ತು ಇದನ್ನು ಮುಂದುವರಿಸಿಕೊಂಡು ಹೋಗುವವರು ನಮ್ಮ ಗುರೂಜಿಯವರು.

ತಮ್ಮ ಅಗಲಿಕೆಯ ಸ್ವಲ್ಪ ಮುನ್ನವಷ್ಟೇ, ತಾವು ಇನ್ನೂ ಹತ್ತೊಂಭತ್ತು ವರ್ಷ ಬದುಕುವುದಾಗಿ ಅಮರರವರು ಹೇಳಿದ್ದರು. ಆದ್ದರಿಂದ ಅವರು ಅಷ್ಟು ಬೇಗ ಆಗಸ್ಟ್ 1982ರಲ್ಲಿ ತಮ್ಮೆಲ್ಲರನ್ನೂ ಅಗಲುವರೆಂಬುದು ಯಾರಿಗೂ ಎಳ್ಳಷ್ಟೂ ಸುಳಿವಿರಲಿಲ್ಲ. ಆದರೆ ಭೌತಿಕಮಟ್ಟದ ಅವರ ಕೆಲಸದ ರೂಪುರೇಷೆಗಳು, ಜವಾಬ್ದಾರಿಯ ಹಸ್ತಾಂತರ ಇನ್ನೂ ಖಚಿತವಾಗಿ ನಿರೂಪಿತವಾಗುವ ಮೊದಲೇ, ತಮ್ಮ ಕೆಲಸವನ್ನು ಅಂದು ಹಿಂದೆ ಬಿಟ್ಟುಹೋಗಬೇಕೆಂದು ಅಮರರವರಿಗೆ ಗೊತ್ತಿತ್ತು. ಆ ದಿನ ಗುರೂಜಿಯವರು ಅಮರರವರನ್ನು ಭೇಟಿಯಾದಾಗ ಅವರು ಎಂದಿನಂತಿರದೆ, ಆತಂಕಗೊಂಡಿದ್ದರು. ಹಾಗೆ ಆತಂಕಗೊಂಡಿದ್ದು ಅಮರರವರ ಮಾನವಭಾಗ, ಎಂದು ಗುರೂಜಿಯವರು ಹೇಳುತ್ತಾರೆ. ಆ ಘಳಿಗೆಯಲ್ಲಿ ಅವರು ಋಷಿ–ಕೆಲಸದಲ್ಲಿ ಭಾಗಿಗಳಾಗಿದ್ದ ಪ್ರತಿಯೊಬ್ಬರೊಂದಿಗೂ ವೈಯಕ್ತಿಕವಾಗಿ ಮಾತನಾಡಲು ಬಯಸಿದ್ದರು. ಅವರ ಎಲ್ಲ ಸೂಚನೆಗಳನ್ನೂ ಚಾಚೂತಪ್ಪದೆ ಪಾಲಿಸುವುದಾಗಿ ಗುರೂಜಿಯವರು ಹೇಳಿದಾಗ, ಅಮರರವರು, "ಅಷ್ಟು ಸಾಲದು. ಎಲ್ಲರೂ ಪಾಲಿಸಬೇಕೆಂದು ನಾನು ಬಯಸುತ್ತೇನೆ" ಎಂದು ಹೇಳಿದರು. ಗುರೂಜಿಯವರೊಂದಿಗಿನ ಅವರ ಈ ಕೊನೆಯ ವಾಕ್ಯ ನಮಗೆಲ್ಲ ದೈವೀ ಶೀರ್ಷಿನಂತೆ.

ಅಮರರವರು ಈ ಮಟ್ಟದಿಂದ ಬಹುದೂರ ಹೋಗಿದ್ದಾರೆ ಆದರೆ ಅವರು ನಮ್ಮಿಂದ ಎಂದೂ ದೂರವಿಲ್ಲ. ಗುರೂಜಿಯವರು ನಮಗೂ ಮತ್ತು ಅಮರರಿಗೂ ನಡುವೆ ಇರುವ ಸಂಪರ್ಕ ಕೊಂಡಿ. ಗುರೂಜಿಯವರು ಆಡುವ ಮಾತುಗಳು ಮತ್ತು ಕೊಡುವ ಸೂಚನೆಗಳು, ಸ್ವತಃ ಅಮರರಿಂದ ಬರುವ ಮಾತುಗಳು ಮತ್ತು ಸೂಚನೆಗಳು. ಅಮರರು ಗುರೂಜಿಯವರ ಮುಖಾಂತರ ನಮ್ಮನ್ನು ತಲುಪುತ್ತಾರೆ.

ಅಮರರು ನಮಗೆ ಮುಂದಿನ ಕಾಲಘಟ್ಟಗಳ ಜ್ಞಾನ ಮತ್ತು ಮೌಲ್ಯ ವ್ಯವಸ್ಥೆಗಳನ್ನು ಕೊಟ್ಟರು ಆದರೆ ಅವರು, "ಇದು ಋಷಿಗಳಿಂದ ಬಂದ ಜ್ಞಾನ" ಎಂದಷ್ಟೇ ಹೇಳಿದರು. ಅವರು ತಾವು ಪಡೆದ ಎಲ್ಲ ಜ್ಞಾನವನ್ನು ವಾರಕ್ಕೊಂದು ಬಾರಿ ಸಂಧಿಸುತ್ತಿದ್ದ ಅವಧಿಗಳಲ್ಲಿ ಗುರೂಜಿಯವರಿಗೆ ವರ್ಗಾಯಿಸಿದರು. ಮುಂದೊಂದು ದಿನ, "ಈಗ ಪತಂಜಲಿ ಅಷ್ಟಾಂಗ ಯೋಗಕ್ಕೆ ಒಂದು ಅಧ್ಯಾಯವನ್ನು ಸೇರಿಸಬಹುದು" ಎಂದು ಹೇಳಿದರು, ಮತ್ತೆ ಮಾತು ಮುಂದುವರಿಸಿ, "ಇದೇ ಸಂಪೂರ್ಣ ಜ್ಞಾನವಲ್ಲ. ಕಾಲಕಾಲಕ್ಕೆ ಹೊಸ ಜ್ಞಾನ ಲಭ್ಯವಾದಂತೆ, ಇರುವ ಜ್ಞಾನವನ್ನು ಆಧುನೀಕರಿಸಬೇಕು" ಎಂದು ಹೇಳಿದರು. ಪ್ರೀತಿ ಮತ್ತು ಬೆಳಕುಗಳ ಹೊಸಯುಗವನ್ನು ಪ್ರವೇಶಿಸಿ, ಹೊಸಯುಗದಲ್ಲಿ ಮಾನವ ಜನಾಂಗ ಬದುಕಲು ಸಹಾಯಕವಾಗುವಂತೆ, ಅಮರರವರು ಗುರೂಜಿಯವರ ಮುಖಾಂತರ ಕೆಲಸಮಾಡುತ್ತಿದ್ದಾರೆ. ■

## ಮಹರ್ಷಿ ಅಮರ

(ಶೋಭಾರಾವ್; ಅನು: ಸುಧಾಕರ್)

ಗುರೂಜಿಯವರು ಅಮರರವರನ್ನು ನಮ್ಮ ಜೀವನಕ್ಕೆ ಪರಿಚಯಿಸಿದರು. ಅವರೊಂದಿಗೆ ಹೊಸ ಚೈತನ್ಯಗಳೂ ಮತ್ತು ಹೊಸ ಜ್ಞಾನವೂ ಬಂದವು. ಇವು ನಮಗೆ ಅವರಿಂದ ಬಂದ ಬೆಲೆಕಟ್ಟಲಾಗದ ಕೊಡುಗೆಗಳು. ಅಮರರ ಬಗ್ಗೆ, ಅವರ ವಿನಯವಂತಿಕೆ ಮತ್ತು ಉದಾತ್ತತೆ ಹಾಗೂ ಅವರ ಅತೀಂದ್ರಿಯ ಸಾಹಸಗಳ ಬಗ್ಗೆ, ಗುರೂಜಿಯವರು ಯಾವಾಗಲೂ ಮಾತನಾಡುತ್ತಾರೆ. ಆದ್ದರಿಂದ ಮಾನಸದ ಸದಸ್ಯರಾದ ನಾವು ಅವರನ್ನು ನೋಡಲಿಲ್ಲವಾದರೂ ಕೂಡ ನಮಗೆ ಅಮರರೊಂದಿಗೆ ಆಳವಾದ ಸಂಪರ್ಕವಿರುವಂತೆ ಭಾಸವಾಗುತ್ತದೆ.

ನಮ್ಮ ಮಾರ್ಗದರ್ಶಿ ಆಸ್ಟ್ರಲ್ ಮಾಸ್ಟರ್‌ಗಳಾದ ಸಪ್ತಋಷಿಗಳನ್ನು ಅಮರರು ನಮಗೆ ಪರಿಚಯಿಸಿದರು. ಈ ಲೋಕಕ್ಕೆ ಇಳಿದುಬಂದು, ಮೊದಲಬಾರಿಗೆ ನಾವು ಇಲ್ಲಿ ಜನ್ಮತಳೆಯಲು ಋಷಿಗಳು ನಮಗೆ ಮಾರ್ಗದರ್ಶಿಸಿದರು; ಆಗಿನಿಂದಲೂ ಸದಾಕಾಲ ಋಷಿಗಳು ನಮ್ಮೊಂದಿಗಿದ್ದಾರೆ ಎಂದು ನಾವು ಅರಿತುಕೊಳ್ಳುವಂತೆ ಮಾಡಿದರು. ಅಪಾರವಾದ ಪ್ರೀತಿ ಮತ್ತು ತಾಳ್ಮೆಯಿಂದ ಯಾವುದೇ ಸ್ವ–ಹಿತಾಸಕ್ತಿಗಳಿಲ್ಲದೆ ಋಷಿಗಳು ಸೂಕ್ಷ್ಮಮಟ್ಟಗಳಿಂದ ಮಾಡುತ್ತಿರುವ ಅಗಾಧವಾದ ಕೆಲಸದ ಇಣುಕುನೋಟವನ್ನು ಅಮರರು ನಮಗೆ ತೋರಿಸಿದ್ದಾರೆ. ನಮ್ಮ ಜೀವನದಲ್ಲಿ ಚೈತನ್ಯಗಳು ತುಂಬಾ ಮುಖ್ಯ ಪಾತ್ರವನ್ನು ವಹಿಸುತ್ತವೆ ಮತ್ತು ಪ್ರಪಂಚದಲ್ಲಿ ಬದಲಾವಣೆಗಳನ್ನು ತರುವುದಕ್ಕಾಗಿ ಋಷಿಗಳು ವಿವಿಧ ಚೈತನ್ಯಗಳನ್ನು ಆಗಿಂದಾಗ್ಗೆ ಬಿಡುಗಡೆ ಮಾಡುತ್ತಾರೆ ಎನ್ನುವುದು ನಮಗೆ ಈಗ ತಿಳಿದಿದೆ.

ಫೋಟಾನ್ ಬೆಲ್ಟ್ ಬಗೆಗಿನ, ಮತ್ತು 2012ರಲ್ಲಿ ಸಂಭವಿಸಬಹುದಾದ ಬದಲಾವಣೆಗಳ ಬಗೆಗಿನ ಹೊಸ ಜ್ಞಾನವನ್ನು ಅಮರರು ಕೊಟ್ಟಿದ್ದಾರೆ. ಬೆಳಕಿನ ಯುಗಕ್ಕೆ ಸುಲಭವಾಗಿ ತಲುಪಲು ಇರುವ ಒಂದೇ ಮಾರ್ಗ ಪರಿವರ್ತನೆ ಎಂದು ಅರಿವು ಮೂಡಿಸಿದ್ದಾರೆ.

ಅವರು ತಾವು ಹೇಳಿದ್ದೆಲ್ಲವನ್ನೂ ಅಕ್ಷರಶಃ ಬಾಳಿದರು. ಅಮರರ ಜೀವನ ಅವರ ಸರಳ ಮತ್ತು ಉದಾತ್ತ ವ್ಯಕ್ತಿತ್ವವನ್ನು ಪ್ರತಿಬಿಂಬಿಸುತ್ತದೆ. ಅತಿದೂರದಲ್ಲಿರುವ ಇನ್ನೊಂದು ಗ್ಯಾಲಕ್ಸಿಯಲ್ಲಿದ್ದರೂ ಈ ದೈವೀ ಮಾಸ್ಟರ್ ಬೆಳಕಿನ ಮತ್ತು ಪ್ರೀತಿಯ ಹೊಸಯುಗಕ್ಕೆ ನಮ್ಮನ್ನು ಮಾರ್ಗದರ್ಶಿಸುವ ತಮ್ಮ ಧ್ಯೇಯವನ್ನು ಅಪರಿಮಿತ ಪ್ರೀತಿ ಮತ್ತು ತಾಳ್ಮೆಯಿಂದ ಇಂದಿಗೂ ಮುಂದುವರೆಸುತ್ತಿದ್ದಾರೆ. ■

## ಪ್ರಶ್ನೆಗಳು ಮತ್ತು ಉತ್ತರಗಳು

(ಸಂಗ್ರಹ: ಶೋಭಾ ಕೆ. ರಾವ್; ಅನು: ಉಷಾ ವಾಸನ್)

**ಪ್ರ: ನಾವು ಧ್ಯಾನಕ್ಕೆ ಏಕೆ ಇಷ್ಟೊಂದು ಮಹತ್ವ ಕೊಡುತ್ತೇವೆ?**

ಉ: ನಾವು ಧ್ಯಾನಕ್ಕೆ ಮಹತ್ವವನ್ನು ಕೊಡುತ್ತೇವೆ ಏಕೆಂದರೆ ಅದು ಆಧ್ಯಾತ್ಮಿಕತೆಯಲ್ಲಿ ಮೊದಲ ಹೆಜ್ಜೆ, ನಮ್ಮ ಮುಂದೆ ಇಡೀ ಪ್ರಪಂಚವನ್ನು ತೆರೆದಿಡುವ ಬಾಗಿಲು. ತುಂಬಾ ಮುಖ್ಯವಾಗಿ, ಅದು ನಮ್ಮನ್ನು ಎಲ್ಲರೂ ಇಷ್ಟಪಡುವ ಮತ್ತು ಪ್ರೀತಿಸುವ ಮನುಷ್ಯರನ್ನಾಗಿ ಮಾಡುತ್ತದೆ. ಧ್ಯಾನ ನಮಗೆ ಈ ಜೀವನವನ್ನು ಪೂರ್ಣವಾಗಿ ಬದುಕಲು, ಈ ಸೃಷ್ಟಿಯ ಹೊಸ ಮತ್ತು ಸುಂದರ ವಿಷಯಗಳನ್ನು ಕಂಡುಹಿಡಿಯುವಲ್ಲಿ ಹಾಗೂ ನಮ್ಮ ಎಲ್ಲಾ ಸೂಕ್ಷ್ಮ ಸಂವೇದನೆಯನ್ನು ಹೆಚ್ಚಿಸುವಲ್ಲಿ ಸಹಾಯ ಮಾಡುತ್ತದೆ. ಧ್ಯಾನ, ಶಾಂತ ಜೀವನ ನಡೆಸುವಲ್ಲಿ, ಋಷಿಗಳು ಮತ್ತು ದೇವರೊಂದಿಗೆ ಸಂಪರ್ಕ ಕಲ್ಪಿಸುವಲ್ಲಿ ಸಹಾಯ ಮಾಡುತ್ತದೆ; ನಮ್ಮ ಅರಿವನ್ನು ವಿಸ್ತರಿಸುತ್ತದೆ, ನಮ್ಮ ಆಧ್ಯಾತ್ಮಿಕ ಗುರಿ ಮತ್ತು ಸತ್ಯವನ್ನು ತಿಳಿಯುವಲ್ಲಿ ಸಹಾಯ ಮಾಡುತ್ತದೆ.

**ಪ್ರ: ಧ್ಯಾನ ಮಾಡುವುದರಿಂದ ನಮ್ಮ ಎಲ್ಲಾ ಕರ್ಮಗಳು ಕಳೆಯುತ್ತವೆಯೇ?**

ಉ: ಧ್ಯಾನ ಮಾಡುವುದರಿಂದ ಹೆಚ್ಚಿನ ಕರ್ಮಗಳು ಕಳೆಯುತ್ತವೆ. ಒಬ್ಬ ವ್ಯಕ್ತಿ ಧ್ಯಾನ ಮಾಡದಿದ್ದರೂ, ಆತ ಪರಿವರ್ತನೆಯಾದರೆ, ಕೆಲವು ಕರ್ಮಗಳು ಕಳೆಯುತ್ತವೆ. ಆದ್ದರಿಂದ, ಕರ್ಮಗಳನ್ನು ಕಳೆಯಲು ಮೂರು ಮಾರ್ಗಗಳಿವೆ: ಕರ್ಮಗಳನ್ನು ಅನುಭವಿಸುವುದರಿಂದ, ಧ್ಯಾನದಿಂದ ಮತ್ತು ಪರಿವರ್ತನೆಯಿಂದ.

**ಪ್ರ: ನಮ್ಮ ಎಲ್ಲಾ ಕರ್ಮಗಳಿಂದ ಒಂದೇ ಜನ್ಮದಲ್ಲಿ ಮುಕ್ತರಾಗಬಹುದೇ?**

ಉ: ಹೌದು, ಇದು ನಿರೀಕ್ಷೆ. ನಮ್ಮ ಜೀವಿತ–ಕಾಲಾವಧಿ ಹಾಗೆಯೇ ನಿರ್ಣಯಿಸಲ್ಪಟ್ಟಿದೆ. ಸುದೀರ್ಘ ಜೀವನ ಎಂದರೆ, ನಾವು ತುಂಬಾ ಕರ್ಮಗಳನ್ನು ತೀರಿಸಿಕೊಳ್ಳಬೇಕೆಂದು ಅರ್ಥ.

**ಪ್ರ: ನಾವು ನಮ್ಮ ಕರ್ಮಗಳನ್ನು ಕಳೆದಿದ್ದೇವೆಂದು ಹೇಗೆ ತಿಳಿಯುವುದು?**

ಉ: ನಾವು ನಮ್ಮ ಅಂತರ್ ಗ್ರಹಣ ಶಕ್ತಿಯನ್ನು ಉಪಯೋಗಿಸಬೇಕು. ಕರ್ಮಗಳು ಕಳೆದುಕೊಳ್ಳುವುದನ್ನು, ನಾವು ಅನುಭವಿಸುವ ಶಾಂತತೆಯ ಮಟ್ಟ ಮತ್ತು ನಾವು ಅನುಭವಿಸುವ ಸಮಾಧಿಯ ಗುಣಮಟ್ಟದಿಂದ ತಿಳಿದುಕೊಳ್ಳಬಹುದು. ನಾವು ನಮ್ಮ ಕರ್ಮಗಳನ್ನು ಕಳೆದುಕೊಂಡಿದ್ದೇವೆಯೇ ಇಲ್ಲವೇ ಎಂದು ತಿಳಿದುಕೊಳ್ಳಲು ಇವೆರಡೂ ಅಥವಾ ಎರಡರಲ್ಲೊಂದು ಸಾಕು.

**ಪ್ರ: ಜನರು ಅವರ ಆಧ್ಯಾತ್ಮಿಕ ಗುರಿಯನ್ನು ತಲುಪುವಲ್ಲಿ ಏಕೆ ಅಸಫಲರಾಗುತ್ತಾರೆ?**

ಉ: ನಾವು ಆಧ್ಯಾತ್ಮಿಕ ಗುರಿಯನ್ನು ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ. ನಾವು ಸಾಧನೆಯನ್ನು ತೆಗೆದುಕೊಳ್ಳುತ್ತೇವೆ ಆದರೆ ಹೇಗೋ ಆಸಕ್ತಿ ಕಳೆದುಕೊಳ್ಳುತ್ತೇವೆ. ನಮ್ಮ ಮನೋಧರ್ಮ ತುಂಬಾ ಸಾಂದರ್ಭಿಕವಾಗಿರುತ್ತದೆ. ನಾವು ಮಾರ್ಗದರ್ಶನಗಳನ್ನು ಅನುಸರಿಸುವುದಿಲ್ಲ, ಆಧ್ಯಾತ್ಮಿಕತೆಯನ್ನು ಅರ್ಥಮಾಡಿಕೊಳ್ಳುವುದಿಲ್ಲ. ಜನರು ಏಕಕಾಲದಲ್ಲಿ ಹಲವು ಮಾರ್ಗಗಳನ್ನು ಅನುಸರಿಸಲು ಪ್ರಯತ್ನಿಸುತ್ತಾರೆ ಮತ್ತು ಗೊಂದಲಕ್ಕೊಳಗಾಗುತ್ತಾರೆ. ನಮ್ಮ ಗುರಿಯ ಬಗ್ಗೆ ನಮಗೆ ಸ್ಪಷ್ಟ ಚಿತ್ರಣವಿರಬೇಕು.

**ಪ್ರ: ಸರಳವಾದ ಆಧ್ಯಾತ್ಮಿಕ ಗುರಿ ಯಾವುದು?**

ಉ: ಒಳ್ಳೆಯತನ; ಒಳ್ಳೆಯವರಾಗಿರುವುದು.

**ಪ್ರ: ನಾನು ಸೂಕ್ಷ್ಮಶರೀರ ಪ್ರಯಾಣ ಮಾಡದೆಯೇ ಸಮಾಧಿಯನ್ನು ಅನುಭವಿಸಬಹುದೇ?**

ಉ: ಹೌದು, ಸೂಕ್ಷ್ಮಶರೀರ ಪ್ರಯಾಣ ಮಾಡಬೇಕಾಗಿಲ್ಲ, ಆದರೆ ನೀವು ಸಮಾಧಿಯನ್ನು ಅನುಭವಿಸಬಹುದು.

**ಪ್ರ: ಸಮೂಹ ಸಮಾಧಿ ಎನ್ನುವುದು ಇದೆಯೇ?**

ಉ: ಇಲ್ಲ. ಸಮಾಧಿ, ಒಂದು ವೈಯಕ್ತಿಕ ಅನುಭವ; ಸಮೂಹ ಸಮಾಧಿ ಎನ್ನುವುದು ಇಲ್ಲ. ಒಬ್ಬ ವ್ಯಕ್ತಿ, ಪ್ರತ್ಯೇಕವಾಗಿಯೇ ಆಗಲಿ ಅಥವಾ ಗುಂಪಿನಲ್ಲಿಯೇ ಆಗಲಿ ಧ್ಯಾನ ಮಾಡಿದಾಗ, ಸಮಾಧಿಯನ್ನು ಅನುಭವಿಸುತ್ತಾನೆ.

**ಪ್ರ: ಮೌನವಾಗಿರುವುದು ಎನ್ನುವುದರ ಅರ್ಥವೇನು?**

ಉ: ಸಂಪೂರ್ಣವಾದ ಅರ್ಥದಲ್ಲಿ, ಅದು ಆಲೋಚನೆಗಳಿಲ್ಲದ, ಭಾವನೆಗಳಿಲ್ಲದ ಮತ್ತು ದೇಹದ ಚಲನೆಯಿಲ್ಲದ ಸ್ಥಿತಿ. ಇದು ನಾವು ಧ್ಯಾನ ಮಾಡುವಾಗ ಮಾತ್ರ ಸಾಧ್ಯ. ವಾಸ್ತವದಲ್ಲಿ, ಅದು ಏನೂ ಮಾಡದಿರುವುದು, ಕ್ರಿಯಾಶೀಲನಾಗದಿರುವುದು ಮತ್ತು ಮಾತನಾಡದಿರುವುದು.

**ಪ್ರ: ಅಮರರವರಿಗೆ ವಿಶಿಷ್ಟ ಶಕ್ತಿಗಳಿದ್ದವೇ?**

ಉ: ಅಮರರವರಿಗೆ ಅಗಾಧವಾದ ವಿಶಿಷ್ಟ ಶಕ್ತಿಗಳಿದ್ದವು. ಆದರೆ ಅವರು ಅದನ್ನು ಎಂದೂ ಪ್ರದರ್ಶಿಸುತ್ತಿರಲಿಲ್ಲ ಅಥವಾ ಅದರ ಬಗ್ಗೆ ಮಾತನಾಡುತ್ತಿರಲಿಲ್ಲ. ಅವರು ಆ ಶಕ್ತಿಗಳನ್ನು ಅವರು ಮಾಡುತ್ತಿದ್ದ ಋಷಿ–ಕಾರ್ಯಗಳಲ್ಲಿ ಉಪಯೋಗಿಸುತ್ತಿದ್ದರು.

**ಪ್ರ: ನಾನು ಋಷಿಗಳೊಂದಿಗೆ ಸಂಪರ್ಕ ಪಡೆದ ಮೇಲೆ, ಈ ಮಾಹಿತಿಯನ್ನು ಬೇರೆಯವರೊಂದಿಗೆ ಹಂಚಿಕೊಳ್ಳಬಹುದೇ?**

ಉ: ಎಂದಿಗೂ ಈ ವಿಷಯಗಳ ಬಗ್ಗೆ ಮಾತನಾಡದಿರಿ ಎಂಬುದು ನನ್ನ ಸಲಹೆ. ನೀವು ಋಷಿಗಳೊಂದಿಗೆ ಸಂಪರ್ಕ ಪಡೆದರೆ, ಅದು ನಿಮ್ಮ ವೈಯಕ್ತಿಕ ಆಧ್ಯಾತ್ಮಿಕ ಬೆಳವಣಿಗೆಗಾಗಿ ಮಾತ್ರ. ಜನರು ನಿಮ್ಮಿಂದ ಹೊರಹೊಮ್ಮುವ ಕಂಪನಗಳನ್ನು ಹಾಗೂ ನಿಮ್ಮಲ್ಲಿರುವ ಪ್ರೀತಿ, ಶಾಂತಿ ಮತ್ತು ಒಳ್ಳೆತನವನ್ನು ಹೇಗೋ ಗುರುತಿಸುತ್ತಾರೆ. ■


### ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| 2012 - End or Beginning | 100/- |
| Preparing for 2012 | 100/- |
| iGuruji - Vol 1 | 150/- |
| iGuruji - Vol 2 | 120/- |
| iGuruji - Vol 3 | 150/- |
| iGuruji - Vol 4 | 150/- |
| Higher Communication & Other Realities | 100/- |
| Living in the Light of My Guru | 220/- |
| How to Meditate | 50/- |
| Dhyana Yoga | 50/- |
| Descent of Soul | 50/- |
| Practising Shambala Principles | 50/- |
| Astral Ventures of A Modern Rishi | 50/- |
| Channelled Knowledge from the Rishis | 250/- |
| Channelled Knowledge from the Rishis-Vol-2 | 150/- |
| Guruji Speaks Part - I | 200/- |
| Guruji Speaks Part - II | 200/- |
| Guruji Speaks Vol - 3 | 150/- |
| The Book of Reflections - Vol 1 | 200/- |
| The Book of Reflections - Vol 2 | 200/- |
| Meditators on Meditations | 75/- |
| Meditators on Experiences | 75/- |
| Meditational Experiences | 150/- |
| Awareness | 60/- |
| Living in Light | 10/- |
| Light | 10/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಐ–ಗುರೂಜಿ ಭಾಗ 1 | 150/- |
| ಐ–ಗುರೂಜಿ ಭಾಗ 2 | 120/- |
| ಉನ್ನತ ಸಂಪರ್ಕಗಳು | 100/- |
| ಅನಿಸಿಕೆಗಳು | 120/- |
| 2012 ಅಂತ್ಯ ಅಥವಾ ಆರಂಭ | 100/- |
| 2012ಕ್ಕೆ ಸಿದ್ಧತೆ | 100/- |
| ಧ್ಯಾನ ಮಾಡುವುದು ಹೇಗೆ | 50/- |
| ಧ್ಯಾನ ಯೋಗ | 50/- |
| ಆತ್ಮದ ಅವರೋಹಣ | 50/- |
| ಶಂಬಲ ನಿಯಮಗಳ ಅಭ್ಯಾಸ | 50/- |
| ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | 50/- |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ऋषींकडून मिळालेले ज्ञान (Marathi) | 200/- |
| प्रकाशवाट (Marathi) | 150/- |
| २०१२ – अंत की आरंभ? (Marathi) | 100/- |
| २०१२ – सालाची तयारी (Marathi) | 100/- |
| आय्गुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्त्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| தியானம் செய்வது எப்படி | 50/- |
| ஒளியின் வாயில்கள் | 200/- |
| 2012 முடிவா அல்லது தொடகமா | 100/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| కాంతికి ద్వారములు | 150/- |

RNI. No. KARKAN/2003/13739 Registered Postal Regn. No. CPMG/KA/CNA-48/2009-11
Date of posting Newsletter-25th of Every Month. Posted at Bangalore GPO No. of Pages-8



ಗುರೂಜಿ ಕೃಷ್ಣಾನಂದ (1939)

### ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('ಮಾನಸ ಫೌಂಡೇಶನ್'ನ ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80–G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

## ಆಧ್ಯಾತ್ಮಿಕ ಅನುಭವಗಳು

(ಸಂಗ್ರಹ: ಶೋಭಾ ಕೆ. ರಾವ್; ಅನು: ಸ್ವರ್ಣಲತ)

ಮೇ ತಿಂಗಳ ಒಂದು ಭಾನುವಾರದಂದು ಗುರೂಜಿಯವರ ಉಪನ್ಯಾಸವನ್ನು ಕೇಳುತ್ತಿದ್ದಾಗ, ನನ್ನ ಹಿಂದಿನಿಂದ ಅಗಾಧವಾದ ಬಿಳಿಬಣ್ಣದ ಬೆಳಕು ಬಂದು ನನ್ನನ್ನು ಆವರಿಸಿದಂತೆನಿಸಿತು. ನನ್ನ ದೇಹವಿದ್ದ ಜಾಗದಲ್ಲಿ ಬರೀ ಬೆಳಕೇ ಇತ್ತು. ಆಗ ನಾನು ಅತ್ಯಂತ ಪ್ರಶಾಂತತೆಯಿಂದ ಕೂಡಿದ್ದೆ. ನಂತರ ಲೈಟ್ ಚಾನಲ್ ಮಾಡುತ್ತಿದ್ದಾಗ ನಾನು ಬೆಳಕಿನಲ್ಲೇ ಸಂಪೂರ್ಣವಾಗಿ ತನ್ಮಯಳಾಗಿ ಹೋಗಿದ್ದೆ. ನಾನು ಭೂ ಮಾತೆಯೊಂದಿಗೆ ಬೆರೆತು ಹೋದಂತೆ ಮತ್ತು ಇಡೀ ವಿಶ್ವಕ್ಕೆ ವಿಸ್ತರಿಸಿದಂತೆ ಅನಿಸಿತು. ನಂತರ ನನ್ನ ಮುಂದೆ ಅತಿಹೆಚ್ಚಿನ ಚೈತನ್ಯಗಳಿಂದ ತುಂಬಿದ್ದ ಋಷಿಯೊಬ್ಬರನ್ನು ಕಂಡೆ ಮತ್ತು ನಾನು ಅವರಿಂದ ಆಶೀರ್ವಾದವನ್ನು ಪಡೆದೆ. ಈ ಅನುಭವವು ನನಗೆ ಅಗಾಧವಾದ ಶಕ್ತಿಯನ್ನು ತುಂಬಿತು.

– ರಾಖಿ

ನಾನು ಧ್ಯಾನ ಮಾಡುವಾಗ ಒಬ್ಬ ಋಷಿ ನನ್ನ ಮುಂದೆ ಚೈತನ್ಯದ ರೂಪದಲ್ಲಿ ಇರುವ ಅನುಭವವಾಗುತ್ತದೆ ಮತ್ತು ಈ ಅನುಭವ ಕೆಲವು ಸಲ ಬೇರೆ ಸಮಯದಲ್ಲೂ ಆಗುತ್ತದೆ. ಇತ್ತೀಚೆಗೆ ಇದು ಕ್ರಮಬದ್ಧವಾಗಿ ಯಾವಾಗಲೂ ಆಗುತ್ತಿದೆ. ನಾನು ಅವರಿಂದ ಬಂದಿರುವ ಸಂದೇಶಗಳನ್ನು ಆಲಿಸಲು ಮತ್ತು ಅವುಗಳಿಗೆ ಮುಕ್ತ ಮನಸ್ಕಳಾಗಿರಲು ಪ್ರಯತ್ನಿಸುತ್ತಿದ್ದೇನೆ. ಕೆಲವೊಮ್ಮೆ ನನಗೆ ಅವರ ಸಂದೇಶಗಳನ್ನು ಮತ್ತೊಂದು ಹಂತದಲ್ಲಿ ಪಡೆದಂತೆ ಅನಿಸುತ್ತದೆ. ಆದರೆ ಅದು ಪ್ರಜ್ಞಾಪೂರ್ವಕವಾಗಿ ಅಲ್ಲ. ನಾನು ಋಷಿಗಳ ಉಪಸ್ಥಿತಿ ಅನುಭವಿಸುವುದನ್ನು ಬಹಳವಾಗಿ ಇಷ್ಟಪಡುತ್ತೇನೆ. ಈ ಅನುಭವ, ನಿಜವಾಗಿಯೂ ನಾವೆಂದೂ ಒಬ್ಬಂಟಿಗರಲ್ಲ ಎಂಬುವುದನ್ನು ನನಗೆ ಮನದಟ್ಟು ಮಾಡಿಕೊಟ್ಟಿದೆ.

– ಲಿಂಡಾ ಸಾಯರ್

ನಾನು ಶಿರಡಿ ಕ್ಷೇತ್ರದಲ್ಲಿ ಧ್ಯಾನ ಮಾಡುತ್ತಾ 'ಬಾಬಾ' ಅವರನ್ನು ನನ್ನ ಆಧ್ಯಾತ್ಮಿಕ ಪ್ರಗತಿಗೆ ಸಹಾಯ ಮಾಡುವಂತೆ ಕೇಳಿಕೊಂಡೆ. ನಾನು ಅವರಲ್ಲಿ "ದೇವರನ್ನು ಹೇಗೆ ಹುಡುಕಲಿ" ಎಂದು ಪ್ರಶ್ನಿಸಿದೆ. ತಕ್ಷಣ ವೃದ್ಧರೊಬ್ಬರ ಪೂರ್ಣ ವಿಭಿನ್ನವಾದ ಧ್ವನಿ ಕೇಳಿಸಿತು, "ಧ್ಯಾನ ಮಾಡು, ನಾನೂ ಸಹ ಅದನ್ನೇ ಮಾಡುತ್ತಿದ್ದೆ. ನಾನು ನಿನ್ನಿಂದ ಬೇರೆಯಲ್ಲ. ಇಬ್ಬರೂ ಒಂದೇ."

– ಲಲಿತಾ

ಫೆಬ್ರವರಿ 27ರಂದು ಭಾನುವಾರ 11.45ಕ್ಕೆ ಮಾನಸ ಉಪನ್ಯಾಸ–ಧ್ಯಾನ ಸಭಾಂಗಣಕ್ಕೆ ಸಂಪರ್ಕ ಕಲ್ಪಿಸಿಕೊಂಡು ಸ್ವಲ್ಪಹೊತ್ತು ಲೈಟ್ ಚಾನಲ್ ಮಾಡಿ ನಂತರ ಧ್ಯಾನ ಮಾಡಲು ಆರಂಭಿಸಿದೆ. ನಾನು ಕಣ್ಣುಗಳನ್ನು ಮುಚ್ಚುತ್ತಿದ್ದಂತೆ, ಆಕಾಶ–ನೀಲಿ ಬಣ್ಣದ ಮತ್ತು ಹೊಂಬಣ್ಣದ ಬೆಳಕಿನ ಕಿರಣಗಳು ನನ್ನ ಕಣ್ಣ ಮುಂದೆ ಬಂದವು.

– ರೇಣುಕಾ ಸುಧಾಕರ್

17–5–11ರಂದು ರಾತ್ರಿ ನನಗೊಂದು ಕನಸಾಯ್ತು. ಅದರಲ್ಲಿ, ನಾನು ಆಕಾಶದಲ್ಲಿ ನೀಲಿ ಬಣ್ಣದ ಬಿಗಿ ಉಡುಗೆಯನ್ನು ಧರಿಸಿದ್ದ ಜನರ ಮಧ್ಯೆ ಇದ್ದೆ. ನನಗೆ ಅಲ್ಲಿಂದ ಕೆಳಗೆ ಬಿಳಿಯ ಮೋಡಗಳಿಂದ ಮುಸುಕಿದ್ದ ಸಮಸ್ತ ಭೂಮಂಡಲವು ಕಾಣಿಸುತ್ತಿತ್ತು. ಆ ಮೋಡದಿಂದ ಅನೇಕರು ಹೊರಬಂದು ಎಲ್ಲಿಗೋ ಹೋಗುತ್ತಿದ್ದರು. ನಾನು ಎಲ್ಲ ಬಂಧನಗಳಿಂದ ಮುಕ್ತನಾಗಿ ಅತ್ಯಂತ ಹರ್ಷಿತನಾಗಿದ್ದೆ. ಈ ಪ್ರಪಂಚದ ಅನೇಕ ಬಗೆಯ ಅನುಭವಗಳನ್ನು ನನಗೆ ದಯಪಾಲಿಸಿದ್ದಕ್ಕಾಗಿ ಆ ಭಗವಂತನಿಗೆ ವಂದಿಸುತ್ತೇನೆ.

– ವಿಶ್ವಾಸ್ ದೀಕ್ಷಿತ್

18–5–11ರಂದು ಧ್ಯಾನ ಮಾಡುತ್ತಿದ್ದಾಗ ಗುರೂಜಿಯವರು ನೀಲಿ ಛಾಯೆಯ ಬಿಳಿಬಣ್ಣದ ಗೋಳದ ಮಧ್ಯೆ ಧ್ಯಾನಸ್ಥರಾಗಿದ್ದುದನ್ನು ನೋಡಿದೆ. ಆ ಗೋಳದ ಶುಭ್ರವಾದ ಬಿಳಿಯ ಕೇಂದ್ರದ ಹೊರಭಾಗದಿಂದ ಗುರೂಜಿಯವರ ಕಡೆಗೆ ಪ್ರೀತಿ ಹಾಗೂ ಬೆಳಕು ಹರಿಯುತ್ತಿತ್ತು. ಮೇಲಿನಿಂದ ಅನೇಕ ದಿಕ್ಕುಗಳಲ್ಲಿ ಹರಿಯುತ್ತಿದ್ದ ಬೆಳಕಿನ ಕಿರಣಗಳಲ್ಲೊಂದು ನನ್ನ ಕಡೆಗೆ ಹರಿದು ಬರುತ್ತಿತ್ತು. ಆ ಕಿರಣದಲ್ಲಿ ನೀಲಿ ಹಾಗೂ ಹೊಂಬಣ್ಣದ ಆತ್ಮಗಳನ್ನು ನಾನು ಕಂಡೆ. ಸ್ವಲ್ಪ ಸಮಯದ ನಂತರ ನಾನು ಅನಂತವಾಗಿ ಹರಡಿರುವ ಆಕಾಶದಲ್ಲಿ ವೇಗವಾಗಿ ಚಲಿಸಲಾರಂಭಿಸಿದೆ. ನಾನು ನನ್ನ ಪಂಚಕೋಶಗಳಲ್ಲಿ ಇಲ್ಲದೇ ಆ ಕೋಶಗಳೇ ನನ್ನಲ್ಲಿದ್ದಂತೆ ಮತ್ತು ಬೇರೆಲ್ಲವೂ ನನ್ನೊಳಗೇ ಇದ್ದಂತೆ ನನಗೆ ಭಾಸವಾಯಿತು. ಆಗ ನನ್ನಲ್ಲಿ ಮುಕ್ತ ಭಾವನೆ ಮನೆಮಾಡಿತ್ತು.

– ರವೀಂದರ್ ಗೌರ್

ಮೇ 23ರಂದು ಸೂಕ್ಷ್ಮಮಟ್ಟದಲ್ಲಿ ಒಂದು ಆಶ್ಚರ್ಯಕರ ಘಟನೆ ನಡೆಯಿತು. ಅಲ್ಲಿ ಗಾಳಿಯಲ್ಲೊಂದು ಸ್ಪರ್ಶಪರದೆ (Touch Screen) ಇತ್ತು. ಅದು ಯಾವುದೇ ಫಲಕದ ಮೇಲಿರಲಿಲ್ಲ. ಆ ಪರದೆಯ ವಿವಿಧ ಭಾಗಗಳಲ್ಲಿ ಬೇರೆಬೇರೆ ಘಟನೆಗಳು ನಡೆಯುತ್ತಿದ್ದವು. ಅದು ಒಂದು ಬಣ್ಣದ ಚಲನಚಿತ್ರದಂತಿದ್ದು ನಾನು ಈ ಘಟನೆಗಳನ್ನು ಪುನರ್ಜೋಡಣೆ ಮಾಡುತ್ತಿರುವೆನೋ ಎಂಬಂತೆ, ಅವುಗಳನ್ನು ಬದಲಾಯಿಸುತ್ತಿದ್ದೆ! ಒಬ್ಬ ನುರಿತ ಕೆಲಸಗಾರಳಂತೆ ನಾನು ಆ ಕೆಲಸವನ್ನು ಮಾಡುತ್ತಿದ್ದೆ! ಈ ಹಿಂದೆ ನಾನು ಇದರ ಬಗ್ಗೆ ಎಲ್ಲೂ ಓದಿರಲಿಲ್ಲ, ಕೇಳಿರಲಿಲ್ಲ ಅಥವಾ ನೋಡಿರಲಿಲ್ಲವಾದ್ದರಿಂದ ನನಗೆ ಅತ್ಯಂತ ಆಶ್ಚರ್ಯವಾಯಿತು!

– ವಿದ್ಯಾ ವಿಶ್ವಾಮಿತ್ರ

ನಾನು ಗುರೂಜಿಯವರನ್ನು ಕೇಳಬೇಕೆಂದಿದ್ದ ಪ್ರಶ್ನೆಗಳ ಬಗ್ಗೆ ಆಲೋಚಿಸುತ್ತಿರುವಾಗ, ನನ್ನ ಇಡೀ ದೇಹದಲ್ಲಿ ಪ್ರೀತಿ ತುಂಬಿ ತುಳುಕುತ್ತಿರುವಂತೆ ಅನಿಸಿತು – ವಿಶೇಷವಾಗಿ ಹೃದಯಭಾಗದಲ್ಲಿ. ನನ್ನ ಪ್ರಶ್ನೆಗಳು ಕರಗಿಹೋಗಿ, ಅವುಗಳ ಬದಲು ಪ್ರೀತಿ ತುಂಬುತ್ತಿರುವುದು ನನಗೆ ಭಾಸವಾಗುತ್ತಿತ್ತು. ಉತ್ತರಗಳು ಕೂಡಾ ಪ್ರೀತಿಯ ಚೈತನ್ಯಗಳಾಗಿ ನನ್ನೊಳಗೆ ನೆಲೆಸಿದವು. ಇದರಿಂದ ನಾನು ಅತ್ಯಂತ ಭಾವುಕಳಾಗಿ ನನ್ನ ಕಣ್ಣುಗಳಲ್ಲಿ ನೀರೂರಿದವು. ಆ ಪ್ರೀತಿಪೂರಿತ ಭಾವನೆ ಇಡೀ ದಿನ ನನ್ನಲ್ಲಿ ತುಂಬಿತ್ತು.

– ಪ್ರಗತಿ ರಾಜ್

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.200/–
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು – 560 086. ಫೋನ್ : 2335 9992
ಸಂಪಾದಕರು : ಶ್ಯಾಮಲಾ ದೇವಿ